ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

10 ಆಗಸ್ಟ್, 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -150 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಆಗಸ್ಟ್ 15ರಿಂದ ಆರಂಭವಾಗಲಿರುವ ಶ್ರೀಲಂಕಾ ವಿರುದ್ಧದ ಟೆಸ್ಟ್ ಸರಣಿಗೆ ಮುಂಬೈ ಬ್ಯಾಟರ್ ಸರ್ಫರಾಜ್ ಖಾನ್ ಅವರನ್ನು ಆಯ್ಕೆ ಮಾಡಲಾಗಿದೆ.


ಸ್ವತ್ತುಗಾರಿಕೆ » 2


ಅನುದಾನ ಹಂಚಿಕೆಯಲ್ಲಿ ತಾರತಮ್ಯ ಸರಿಯಲ್ಲ » 3


ಮಾದಿಗ ಸಮುದಾಯಕ್ಕೆ ಭವನಕ್ಕೆ 25 ಲ.ರೂ. ನೆರವು » 4

# ಅತೃಪ್ತರ ತಣಿಸಲು ಹೈಕಮಾಂಡ್ ಮೊರೆ

## ದೆಹಲಿಗೆ ತೆರಳಿದ ಡಿ.ಕೆ.ಶಿವಕುಮಾರ್ | ಇಂದು ಖಾತೆ ಹಂಚಿಕೆ ಸಾಧ್ಯತೆ

• ಪ್ರಜೋದಯ ವರದಿ

**ಬೆಂಗಳೂರು:** ಸಚಿವ ಸ್ಥಾನ ವಂಚಿತ ಶಾಸಕರ ಅತೃಪ್ತಿ ಹಾಗು ನೂತನ ಸಚಿವರಿಗೆ ಖಾತೆ ಹಂಚಿಕೆ ರಾಜ್ಯ ಕಾಂಗ್ರೆಸ್‌ಗೆ ಕಗ್ಗಂಟಾಗಿದ್ದು, ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಸರತ್ತು ನಡೆಸುತ್ತಿದ್ದಾರೆ.

ಈ ವಿಚಾರಗಳ ಚರ್ಚೆಗಾಗಿ ಹೈಕಮಾಂಡ್ ಭೇಟಿ ಮಾಡಲು ಭಾನುವಾರ ದೆಹಲಿಗೆ ತೆರಳಿದ್ದಾರೆ. ಅದಕ್ಕೂ ಮೊದಲು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಜೊತೆಗೆ ಗೌಪ್ಯ ಚರ್ಚೆ ನಡೆಸಿದ್ದು ಬಹುತೇಕ ಸೋಮವಾರ ಖಾತೆ ಹಂಚಿಕೆಯಾಗುವ ಸಾಧ್ಯತೆ ಇದೆ. ಜೊತೆಗೆ ಅಸಮಾಧಾನಿತರ ತಣಿಸಲು ಹಳೆಯ ಸಚಿವರ ಖಾತೆಗಳಲ್ಲೂ ಕೆಲ ಬದಲಾವಣೆ ಆಗುವುದರೊಂದಿಗೆ ಮಹಿಳೆಯ



ರಿಗೆ ಸಂಪುಟದಲ್ಲಿ ಅವಕಾಶ ಕಲ್ಪಿಸಿಕೊಡಲಾಗುತ್ತಿದೆ ಎಂದು ತಿಳಿದು ಬಂದಿದೆ.

ಮಹಿಳೆಯರಿಗೆ ರಾಜ್ಯ ಸಂಪುಟದಲ್ಲಿ ಪ್ರಾತಿನಿಧ್ಯ ಕಲ್ಪಿಸಿಲ್ಲ ಎಂಬುದು ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೆ ಎಡೆಮಾಡಿಕೊಟ್ಟಿರುವ ಹಿನ್ನಲೆಯಲ್ಲಿ ಖಾಲಿ ಇರುವ ಸ್ಥಾನಕ್ಕೆ ಒಬ್ಬ ಮಹಿಳೆಯ ಸೇರ್ಪಡೆಗೆ ನಿರ್ಧರಿಸಲಾಗಿದೆ. ಗಾಯತ್ರಿ ಶಾಂತೇಗೌಡ, ರೂಪಾ ಶಶಿಧರ್ ಹಾಗು ಮಾಜಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪೈಕಿ ಒಬ್ಬರಿಗೆ ಸಚಿವ ಸ್ಥಾನ ನೀಡುವ ಸಾಧ್ಯತೆಯಿದೆ.

**ಹಳಬರ ಖಾತೆ ಬದಲಾವಣೆ**

ಮೊದಲ ಹಂತದಲ್ಲೇ ಸಂಪುಟ ಸೇರಿದ್ದ ಹಳಬರ ಖಾತೆಗಳಲ್ಲೂ ಕೆಲ ಬದಲಾವಣೆಯಾಗಲಿದೆ. ಉಪ ಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಬಳಿ ಇರುವ ಮುಜರಾಯಿ ಇಲಾಖೆ ಮತ್ತೆ ರಾಮಲಿಂಗಾ ರೆಡ್ಡಿ ತೆಕ್ಕೆಗೆ

» ನಾಲ್ಕನೇ ಪುಟದಲ್ಲಿ

### ಪಕ್ಷ ಉಳಿದರಷ್ಟೇ ಅಧಿಕಾರ: ಸಿ.ಎಂ.

ಪಕ್ಷ ಉಳಿದರೆ ಸರ್ಕಾರ ಹಾಗು ಅಧಿಕಾರ ಉಳಿಯುತ್ತದೆ. ಹೀಗಾಗಿ ವ್ಯಕ್ತಿ ಪೂಜೆ ಮಾಡುವ ಬದಲು ಪಕ್ಷವನ್ನು ಬಲಪಡಿಸಬೇಕೆಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕರೆ ನೀಡಿದರು.

ಬೆಂಗಳೂರಿನ ಕೆಪಿಸಿಸಿ ಕಚೇರಿಯ ಭಾರತ್ ಜೋಡೋ ಭವನದಲ್ಲಿ ನಡೆದ ಕ್ವಿಟ್ ಇಂಡಿಯಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ತಾವು ಮುಖ್ಯಮಂತ್ರಿ ಆಗಿದ್ದರೂ, ಕಾರ್ಯಕರ್ತನಾಗಿ ಪಕ್ಷದ ಶಿಸ್ತಿಗೆ ಬದ್ಧರಾಗಿರುವುದಾಗಿ ಹೇಳಿದರು.

ಇಂದು ಸರ್ವಾಧಿಕಾರಿ ಮನಸ್ಥಿತಿಯವರು ಅಧಿಕಾರ ಬಿಟ್ಟು ತೊಲಗಬೇಕೆಂಬ ಸಂದೇಶ ನೀಡಬೇಕಿದೆ. ಅಂದು ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು ಎಂಬ ಘೋಷಣೆ ಮೊಳಗಿದ್ದರೆ, ಇಂದು ಪ್ರತಿಭಟನೆ ಹಾಗು ಪ್ರಜಾಪ್ರಭುತ್ವವನ್ನು ಉಳಿಸುವುದು ನಮ್ಮ ಜನ್ಮಸಿದ್ಧ ಹಕ್ಕು ಎಂಬ ಘೋಷಣೆ ಮೊಳಗಬೇಕಿದೆ. ಸಂವಿಧಾನವೇ ನಮಗೆ ಪವಿತ್ರ ಗ್ರಂಥ. ನಮ್ಮ ಹೆಗಲ ಮೇಲೆ ತ್ರಿವರ್ಣ ಧ್ವಜವಿದೆ. ಕಾಂಗ್ರೆಸ್ ಪಕ್ಷ ಯಾರಿಗೂ ತಲೆಬಾಗುವುದಿಲ್ಲ. ಗಾಂಧೀ ಕುಟುಂಬ ವನ್ನು ದೇಶದಿಂದ ಹೊರ ಹಾಕಲು ಹಲವು ರೀತಿಯ ಅಪಪ್ರಚಾರ ಹಾಗು ಷಡ್ಯಂತ್ರಗಳು ನಡೆದವು. ಯುಪಿಎ ಸರ್ಕಾರದ ವಿರುದ್ಧ ನಡೆದ ಅಪಪ್ರಚಾರ ದಿಂದ ಕಾಂಗ್ರೆಸ್ ಚುನಾವಣೆಯಲ್ಲಿ ಹಿನ್ನಡೆ ಅನುಭವಿಸಬೇಕಾಯಿತು. ಯುವ ಸಮುದಾಯಕ್ಕೆ ವಾಸ್ತವಾಂಶ ತಿಳಿಸುವ ಉದ್ದೇಶದಿಂದ ರಾಹುಲ್ ಗಾಂಧಿ ಅವರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಭಾರತ್ ಜೋಡೋ ಯಾತ್ರೆ ನಡೆಸಿದ್ದಾರೆಂದರು.

# ಇಂದಿನಿಂದ ಬೇಲೂರು ಭಾಗದಲ್ಲಿ ಕಾಡಾನೆ ಸೆರೆ ಕಾರ್ಯಾಚರಣೆ

## 2 ಹೆಣ್ಣಾನೆಗಳಿಗೆ ರೇಡಿಯೋ ಕಾಲರ್ | ಕೆಪಿ 2 ಕಾಲರ್ ಹೆಸರಿನ ಆನೆ ಸೆರೆಗೆ ಸಿದ್ಧತೆ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಮಲೆನಾಡು ಭಾಗವಾದ ಬೇಲೂರು ತಾಲ್ಲೂಕಿನಲ್ಲಿ ಕಾಡಾನೆಗಳ ಉಪಟಳ ಮಿತಿ ಮೀರಿದ್ದು, ದಾಂಧಲೆ ನಡೆಸುತ್ತಿರುವ ಒಂದು ಆನೆ ಸೆರೆ ಹಾಗು ಆನೆಗಳಿಗೆ ರೇಡಿಯೋ ಕಾಲರ್ ಅಳವಡಿಕೆ ಕಾರ್ಯಾಚರಣೆ ಇಂದಿನಿಂದ ಆರಂಭವಾಗಲಿದೆ.

ಕಾರ್ಯಾಚರಣೆಗೆ ಅರಣ್ಯ ಇಲಾಖೆ ಆ. 8 ರಿಂದ 12ರ ವರೆಗೆ ಅನುಮತಿ ನೀಡಿತ್ತು. ಎರಡು ದಿನ ವ್ಯಾಪ್ತಿಯಲ್ಲಿ ಮಳೆ ಸುರಿದ ಹಿನ್ನಲೆಯಲ್ಲಿ ಆ. 10 ರಿಂದ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಎರಡು ದಿನಗಳ ಒಳಗೆ ಕಾರ್ಯಸಾಧ್ಯವಾಗದಿದ್ದರೆ ಅವಧಿಯನ್ನು ವಿಸ್ತರಿಸುವ ಸಾಧ್ಯತೆ ಇದೆ. ಕೆಪಿ ಕಾಲರ್ 2 ಹೆಸರಿನ ಕಾಡಾನೆಯನ್ನು ಸೆರೆ ಹಿಡಿಯಲು ಯೋಜನೆ ರೂಪಿಸಲಾಗಿದೆ. ಕುಮ್ಕಿ ಆನೆಗಳಾದ ಏಕಲವ್ಯ, ಪ್ರಶಾಂತ್, ಧನಂಜಯ, ಈಶ್ವರ, ಲಕ್ಷ್ಮಣ ಹಾಗು ಅಜ್ಜಯ್ಯ ಆನೆ ಶಿಬಿರಕ್ಕೆ ಬಂದು ತಲುಪಿವೆ.

**ಆನೆ ಶಿಬಿರ ಸ್ಥಳ ಬದಲು**

ಬೇಲೂರು ತಾಲ್ಲೂಕಿನಲ್ಲಿ ಆನೆ ಸೆರೆ ಕಾರ್ಯಾಚರಣೆ ಕೈಗೊಂಡರೆ ಬಿಕ್ಕೋಡಿನಲ್ಲಿ ಆನೆ ಶಿಬಿರ ಮಾಡಲಾಗುತ್ತಿತ್ತು. ಕುಡಿಯುವ ನೀರು, ಸಂಪರ್ಕ ರಸ್ತೆ ಹಾಗು ಎಲ್ಲಾ ರೀತಿಯಿಂದಲೂ ಪ್ರಶಸ್ತ ಜಾಗ ಅದಾಗಿತ್ತಾದರೂ ಈ ಬಾರಿ ಅರಣ್ಯಾಧಿಕಾರಿ ಆನೆ ಕ್ಯಾಂಪ್ ಅನ್ನು ಬಿಕ್ಕೋಡಿನಿಂದ 2 ಕಿ.ಮೀ. ದೂರದ ಚಿಕ್ಕೋಲೆಗೆ ಸ್ಥಳಾಂತರಿಸಿದ್ದಾರೆ. ಸಾಮಾಜಿಕ ಜಾಲತಾಣಗಳ ಅಬ್ಬರದ ಪ್ರಚಾರದ ಪರಿಣಾಮ ಕುಮ್ಕಿ ಆನೆಗಳು ಬಂದಿರುವ ವಿಷಯ ತಿಳಿದು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಕ್ಯಾಂಪ್‌ಗೆ ದಾಂಗುಡಿ ಇಡುತ್ತಿದ್ದರು. ಅದರಿಂದ ಆನೆಗಳ ಉಪಚಾರಕ್ಕೆ ತೊಡಕಾಗುತ್ತಿತ್ತು. ಆ ಹಿನ್ನಲೆಯಲ್ಲಿ ಕ್ಯಾಂಪ್ ಅನ್ನು ಸ್ಥಳಾಂತರ ಮಾಡಲಾಗಿದೆ.

ಬೇಲೂರು ತಾಲ್ಲೂಕಿನಲ್ಲಿ ಈ ವರ್ಷ ನಡೆಸುತ್ತಿರುವ 2ನೇ ಕಾರ್ಯಾಚರಣೆ ಇದಾಗಿದೆ. ಗುಂಪಿನಲ್ಲಿದ್ದ ಎರಡು ಆನೆಗಳಿಗೆ ರೇಡಿಯೋ ಕಾಲರ್ ಅಳವಡಿಸಲಾಗಿದೆ. ಈಗ ಮತ್ತೆ ಒಂದು ಆನೆ ಸೆರೆ ಹಾಗು ಎರಡು ಹೆಣ್ಣಾನೆಗಳಿಗೆ ರೇಡಿಯೋ ಕಾಲರ್ ಹಾಕಲಾಗುತ್ತಿದೆ. ಈ ಬಾರಿ ರೇಡಿಯೋ ಕಾಲರ್ ಜೊತೆಗೆ ಟ್ರಾನ್ಸಾಮಿಟರ್ ಎಂಬ ನೂತನ ತಂತ್ರಜ್ಞಾನ ಅಳವಡಿಸುತ್ತಿರುವುದು ವಿಶೇಷ.

ಬೇಲೂರು ತಾಲ್ಲೂಕಿನಲ್ಲಿ 2019 ರಿಂದ 2026ರ ವರೆಗೆ 13 ಜನರು ಕಾಡಾನೆ ದಾಳಿಗೆ ಬಲಿಯಾಗಿದ್ದಾರೆ. ಜು. 29 ರಂದು ಕಣಗುಪ್ಪೆ ಗ್ರಾಮದ ಧರ್ಮರಾಜು ಆನೆ ದಾಳಿಗೆ ಬಲಿಯಾಗಿದ್ದು, ಸ್ಥಳೀಯರ ಆತಂಕಕ್ಕೆ ಕಾರಣವಾಗಿದೆ.

### ಸಂಸತ್‌ನಲ್ಲಿ 4 ಬಾರಿ ಪ್ರಶ್ನಿಸಿದ್ದೇನೆ: ಶ್ರೇಯಸ್ ಪಟೇಲ್

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಜೋಡಿಸಿದರಷ್ಟೇ ಕಾಡಾನೆ-ಮಾನವ ಸಂಘರ್ಷಕ್ಕೆ ಕೊನೆ ಹಾಡಬಹುದು. ಭದ್ರಾ ಅಭಯಾರಣ್ಯದಲ್ಲಿ ಆನೆ ಧಾಮ ನಿರ್ಮಿಸುವುದಾಗಿ ರಾಜ್ಯ ಸರ್ಕಾರ ಹೇಳಿದೆ. ನಾನು ಸಂಸತ್‌ನಲ್ಲಿ ನಾಲ್ಕು ಬಾರಿ ಕಾಡಾನೆ ಉಪಟಳದಿಂದ ಆಗುತ್ತಿರುವ ಸಮಸ್ಯೆ ಬಗ್ಗೆ ಮಾತನಾಡಿದ್ದೇನೆ. ಅಧಿವೇಶನದಲ್ಲಿ ಅವಕಾಶ ಸಿಕ್ಕರೆ ವಿಷಯ ಪ್ರಸ್ತಾಪಿಸುತ್ತೇನೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಗಮನಕ್ಕೂ ತರಲಾಗಿದೆ. ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ಭರವಸೆಯನ್ನು ನೀಡಿದ್ದಾರೆಂದು ಸಂಸದ ಶ್ರೇಯಸ್ ಪಟೇಲ್ ಅವರು ಹೇಳಿದರು.

**ಜನರ ನಿದ್ದೆಗೆಡಿಸಿದ ಒಂಟಿಕೋರೆ ಆನೆ**

ದೈತ್ಯಾಕಾರದ ಒಂಟಿ ಕೋರೆ ಕಾಡಾನೆ ರೈತರು, ಕಾಫಿ ಬೆಳೆಗಾರರು ಹಾಗು ಕಾರ್ಮಿಕರ ನಿದ್ದೆಗೆಡಿಸಿದೆ. ಹಗಲು ವೇಳೆ ಕಾಫಿ ತೋಟ, ಕಾಡಿನಲ್ಲಿ ವಿಶ್ರಾಂತಿ ಪಡೆಯುವ ಒಂಟಿ ಸಲಗ ರಾತ್ರಿ ವೇಳೆ ಗ್ರಾಮದೊಳಗೆ ಪ್ರವೇಶಿಸಿ ವಾಹನಗಳನ್ನು ಜಖಂಗೊಳಿಸುತ್ತಿದೆ. ವಾರದ ಹಿಂದಷ್ಟೇ ಕಿತ್ತಾವರ ಗ್ರಾಮದಲ್ಲಿ ಆನೆ ಸಂಚರಿಸಿರುವ ವಿಡಿಯೊ ಸಿಸಿಟಿವಿ ಕ್ಯಾಮರದಲ್ಲಿ ಸೆರೆಯಾಗಿದೆ. ಧರ್ಮರಾಜು ಅವರನ್ನು ಹತ್ಯೆಗೈದಿರುವ ಆನೆ ಇದೇ ಎಂದು ಸ್ಥಳೀಯರು ಸಂಶಯ ವ್ಯಕ್ತಪಡಿಸಿದ್ದಾರೆ.

ಗುಂಪಿನಿಂದ ಬೇರ್ಪಟ್ಟು ಇತರ ಕಾಡಾನೆಗಳ ಗುಂಪಿಗೆ ಸೇರದೆ ಒಂಟಿಯಾಗಿ ಓಡಾಡುತ್ತಿರುವ ಒಂಟಿ ಸಲಗ ಸಿಕ್ಕಸಿಕ್ಕವರ ಮೇಲೆ ದಾಳಿ ಮಾಡುತ್ತಿದೆ. ಕೆಲ ತಿಂಗಳ ಹಿಂದೆ ಇದೇ ಕಾಡಾನೆಯನ್ನು ಸೆರೆ ಹಿಡಿದು ರೇಡಿಯೋ ಕಾಲರ್ ಅಳವಡಿಸಲಾಗಿತ್ತು. ರೇಡಿಯೋ ಕಾಲರ್ ಕಳಚಿ ಬಿದ್ದಿರುವುದರಿಂದ ಚಲನವಲನ ಅರಿಯಲು ಅರಣ್ಯ ಇಲಾಖೆ ಇಟಿಎಫ್ ಸಿಬ್ಬಂದಿಗೆ ಸಾಧ್ಯವಾಗುತ್ತಿಲ್ಲ. ಹಗಲು ವೇಳೆಯಲ್ಲಿ ಕಿತ್ತಾವರ ಗುಡ್ಡ ಹಾಗು ಕಾಫಿ ಎಸ್ಟೇಟ್‌ನಲ್ಲಿ ವಿಶ್ರಾಂತಿ ಪಡೆಯುವ ಕಾಡಾನೆ ರಾತ್ರಿ ಆಗುತ್ತಿದ್ದಂತೆ ಕಾಫಿ ತೋಟಗಳ ಮೂಲಕ ಗ್ರಾಮದೊಳಗೆ ನುಗ್ಗಿ ಉಪಟಳ ನೀಡುತ್ತಿದೆ.

### ಇಂದು ಅರಸೀಕೆರೆಗೆ ಸಚಿವ ಶಿವಲಿಂಗೇಗೌಡ

ಅರಸೀಕೆರೆ: ಸಚಿವರಾಗಿ ಅಧಿಕಾರ ವಹಿಸಿಕೊಂಡ ಬಳಿಕ ತವರು ಕ್ಷೇತ್ರಕ್ಕೆ ಕೆ.ಎಂ.ಶಿವಲಿಂಗೇಗೌಡ ಅವರು ಆ.10ರ ಸೋಮವಾರ ಆಗಮಿಸಲಿದ್ದು, ನಾಯಕನ ಆಗಮನಕ್ಕೆ ಕಾಂಗ್ರೆಸ್ ಕಾರ್ಯಕರ್ತರು ಹಾಗು ಅಭಿಮಾನಿಗಳು ಭರ್ಜರಿ ಸಿದ್ಧತೆ ಮಾಡಿಕೊಂಡಿದ್ದಾರೆ.

ನಗರದ ಪ್ರಮುಖ ಸ್ಥಳವಾದ ಬಿ.ಹೆಚ್.ರಸ್ತೆಯ ಪಿಪಿ ವೃತ್ತದಲ್ಲಿ 60 ಅಡಿ ಎತ್ತರದ ಕಟೌಟ್ ನಿರ್ಮಿಸಲಾಗಿದೆ. ನಗರದಾದ್ಯಂತ ಫ್ಲೆಕ್ಸ್ ಮತ್ತು ಬ್ಯಾನರ್ ರಾರಾಜಿಸುತ್ತಿವೆ. ಬೆಂಗಳೂರಿನಿಂದ ತಿಪಟೂರು ಮಾರ್ಗವಾಗಿ ಸಚಿವರು ನಗರಕ್ಕೆ ಬರಲಿದ್ದಾರೆ. ಅರಸೀಕೆರೆ ವಿಧಾನಸಭಾ ಕ್ಷೇತ್ರ ಪ್ರವೇಶಿಸುತ್ತಿದ್ದಂತೆ ಅವರನ್ನು ಸ್ವಾಗತಿಸಲು ಅಭಿಮಾನಿಗಳು ಸಕಲ ತಯಾರಿ ಮಾಡಿಕೊಂಡಿದ್ದಾರೆ. ಕ್ರೇನ್ ಮೂಲಕ ಹೂವಿನ ಹಾರ ಹಾಕಲು ಅಲ್ಲಲ್ಲಿ ಸಿದ್ಧತೆ ನಡೆದಿವೆ. ನಗರದ ಪಿಪಿ ವೃತ್ತದಲ್ಲಿ ಸಚಿವರು ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರುವ ಹಿನ್ನಲೆಯಲ್ಲಿ ಅಗತ್ಯ ಪೊಲೀಸ್ ಭದ್ರತೆ ಕಲ್ಪಿಸಲಾಗಿದೆ.

### ಯಗಚಿ ಜಲಾಶಯಕ್ಕೆ ಬಾಗಿನ ಅರ್ಪಣೆ

• ಪ್ರಜೋದಯ ವರದಿ

**ಬೇಲೂರು :** ಯಗಚಿ ಜಲಾಶಯ ಭರ್ತಿಯಾಗಿದ್ದು, ಶಾಸಕ ಹೆಚ್.ಕೆ.ಸುರೇಶ್ ಅವರು ಬಾಗಿನ ಅರ್ಪಿಸಿ ಸಾಂಕೇತಿಕವಾಗಿ ಹೆಚ್ಚುವರಿ ನೀರನ್ನು ಐದು ಕ್ರಸ್ಟ್ ಗೇಟ್‌ಗಳ ಮೂಲಕ ನದಿಗೆ ಹರಿಸಿದರು.

ಈ ವೇಳೆ ಮಾತನಾಡಿದ ಶಾಸಕರು, 2023ರಲ್ಲಿ ನಾನು ಶಾಸಕನಾದ ಬಳಿಕ ಪ್ರತಿವರ್ಷ ಯಗಚಿ ಜಲಾಶಯ ಭರ್ತಿಯಾಗುತ್ತಿದೆ. ಈ ವರ್ಷ ಬರಗಾಲದಿಂದ ರೈತರು ತತ್ತರಿಸಿದ್ದಾರೆ. ಆದರೂ ಮಲೆನಾಡು ಭಾಗದಲ್ಲಿ ಮಳೆ ಸುರಿಯುತ್ತಿರುವುದರಿಂದ ಜಲಾಶಯಕ್ಕೆ ನೀರು ಹರಿದು ಬಂದ ಕಾರಣ ಭರ್ತಿಯಾಗಿದೆ. ಹೆಚ್ಚುವರಿ ನೀರನ್ನು ನದಿಗೆ ಹರಿಸಬೇಕು. ಇಲ್ಲದಿದ್ದರೆ ಅಪಾಯ ಸಂಭವಿಸುವ ಸಾಧ್ಯತೆ ಇರುತ್ತದೆ.



ಸಂಪ್ರದಾಯದಂತೆ ಪೂಜೆ ಸಲ್ಲಿಸಿ ಬಾಗಿನ ಅರ್ಪಿಸಿದ್ದೇವೆ. ಮುಂದಿನ ದಿನದಲ್ಲಿ ಜಲಾಶಯಕ್ಕೆ ಬಾಗಿನ ಅರ್ಪಿಸಲು ಜಿಲ್ಲಾ ಉಸ್ತುವಾರಿ, ನೀರಾವರಿ ಸಚಿವರು ಮತ್ತು ವಿವಿಧ ಮಠಾಧೀಶರನ್ನು ಆಹ್ವಾನಿಸಲಾಗುವುದು. ಬಯಲು ಸೀಮೆಗೆ ಈಗಾಗಲೇ ಎತ್ತಿನಹೊಳೆ ಕಾಲುವೆಯಿಂದ ನೀರು ಸೇರಿದೆ. ಯಗಚಿ ಏತ ನೀರಾವರಿ ಮೂಲಕ ನೀರನ್ನು ಹರಿಸುವತ್ತ ಅಧಿಕಾರಿಗಳು ಗಮನ ಹರಿಸಬೇಕೆಂದರು. ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ, ಪಿಐ ರೇವಣ್ಣ ಮುಂತಾದವರಿದ್ದರು.

# ಮನಸ್ಥಿತಿ ಸರಿ ಇಲ್ಲದವರಿಂದ ಹಗುರ ಮಾತು: ಶ್ರೇಯಸ್

• ಪ್ರಜೋದಯ ವರದಿ

**ಹಾಸನ:** ಜನಪರ ಕಾರ್ಯಕ್ರಮಗಳ ಮೂಲಕ ಉತ್ತಮ ಆಡಳಿತ ನೀಡುತ್ತಿರುವ ರಾಜ್ಯ ಸರ್ಕಾರದ ಕುರಿತು ಯಾರಾದರೂ ಹಗುರವಾಗಿ ಮಾತನಾಡಿದರೆ ಅವರ ಮನಸ್ಥಿತಿ ಸರಿ ಇಲ್ಲ ಎಂದರ್ಥವೆಂದು ಸಂಸದ ಶ್ರೇಯಸ್ ಪಟೇಲ್ ಅವರು ಟೀಕಿಸಿದರು.

ಶಿವಕುಮಾರ್ ಸರ್ಕಾರ ಅಸ್ಥಿರಗೊಳಿಸುವ ಪ್ರಯತ್ನವನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡುತ್ತಿದ್ದಾರೆಂಬ ಬಿಜೆಪಿ ಸಂಸದ ಗೋವಿಂದ ಕಾರಜೋಳ ಅವರ ಆರೋಪಕ್ಕೆ ಭಾನುವಾರ ನಗರದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ನಮ್ಮ ಸರ್ಕಾರ ಬಲಿಷ್ಟವಾಗಿದೆ. ಸಿದ್ದರಾಮಯ್ಯ ಹಾಗು ಡಿ.ಕೆ.ಶಿವಕುಮಾರ್ ಜೋಡೆತ್ತುಗಳಂತೆ ಕೆಲಸ ಮಾಡುತ್ತಿದ್ದಾರೆ.

ಸರ್ಕಾರದ ಕುರಿತು ಯಾರು ಏನೇ ಹೇಳಿದರೂ ಅದು ಅಸಂಬದ್ಧ. ಮನಸ್ಥಿತಿ ಸರಿ ಇಲ್ಲದವರು ಏನೇನೋ ಮಾತನಾಡುತ್ತಾರೆ. ಬಡವರಿಗೆ, ದೀನ ದಲಿತರಿಗೆ ನ್ಯಾಯ ಒದಗಿಸಿಕೊಡುತ್ತಿರುವ ನಮ್ಮ ಸರ್ಕಾರದ ಬಗ್ಗೆ ಅಸೂಯೆ ಪಡುತ್ತಿದ್ದಾರೆಂದರು.

**ಯಾರಿಗೂ ಅಸಮಾಧಾನ ಇಲ್ಲ**

ಸಚಿವ ಸಂಪುಟದಲ್ಲಿ ಎಲ್ಲಾ ಸಮುದಾಯದವರಿಗೆ ಪ್ರಾತಿನಿಧ್ಯ



ನೀಡಲಾಗಿದೆ. ಈ ಬಗ್ಗೆ ಯಾರಿಗೂ ಅಸಮಾಧಾನ ಇಲ್ಲ. ಮಹಿಳೆಯರಿಗೂ ಸಂಪುಟದಲ್ಲಿ ಅವಕಾಶ ನೀಡಲಾಗುತ್ತದೆ. ನಮ್ಮ ಜಿಲ್ಲೆಯಿಂದ ಕೆ.ಎಂ.ಶಿವಲಿಂಗೇಗೌಡ ಅವರನ್ನು ಪರಿಗಣಿಸಿರುವುದು ವೈಯಕ್ತಿಕವಾಗಿ ಖುಷಿ ತಂದಿದೆ ಎಂದರು.

**ಚರ್ಚೆಗೆ ಬಾರದ ಕೇಂದ್ರ**

ದೇಶದ ಜ್ವಲಂತ ಸಮಸ್ಯೆಗಳ ಕುರಿತು ಸಂಸತ್ ಅಧಿವೇಶನದಲ್ಲಿ ಚರ್ಚಿಸುವ ಬದಲು ಕೇಂದ್ರ ಸರ್ಕಾರ ಕಾಲಹರಣಕ್ಕೆ ಆದ್ಯತೆ ನೀಡುತ್ತಿದೆ. ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ಜಂತರ್-ಮಂತರ್‌ನಲ್ಲಿ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಹಾರ ನಡೆಸಲಾಗಿದೆ. ಅದಕ್ಕೆ ಗೃಹ ಸಚಿವ ಅಮಿತ್ ಶಾ ಅವರು ಸ್ಪಷ್ಟನೆ ನೀಡಬೇಕೆಂದು ನಾವು ಬಯಸುತ್ತೇವೆ. ಆದರೆ, ಕೇಂದ್ರ ಸರ್ಕಾರಕ್ಕೆ ಸದನ ನಡೆಸಬೇಕೆನ್ನುವ ಮನೋಭಾವ ಇಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

# ನನ್ನನ್ನು ಖರೀದಿಸುವವರು ಹುಟ್ಟಿಲ್ಲ



- ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಗುಡುಗು
- ಕಾಂಗ್ರೆಸ್ ವಿರುದ್ಧ ವಾಕ್ಸಮರ

• ಪ್ರಜೋದಯ ವರದಿ

**ಮೈಸೂರು:** ನನ್ನನ್ನು ಯಾರೂ ಖರೀದಿಸಲು ಆಗುವುದಿಲ್ಲ. ಅಂತಹವರು ಇನ್ನೂ ಈ ರಾಜ್ಯದಲ್ಲಿ ಹುಟ್ಟಿಲ್ಲ. ನನ್ನ ಧ್ವನಿಯನ್ನು ನಿಲ್ಲಿಸುವುದಕ್ಕೂ ಆಗುವುದಿಲ್ಲವೆಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಗುಡುಗಿದರು.

ಡಿಎಲ್‌ಎಫ್ ಕಂಪನಿಯಿಂದ ಕಿಕ್ ಬ್ಯಾಕ್ ಪಡೆದಿದ್ದಾರೆಂಬ ತಮ್ಮ ವಿರುದ್ಧದ ಆರೋಪದ ಬಗ್ಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, ಕೇರಳದ ಕಾಂಗ್ರೆಸ್ ಮುಖ್ಯಮಂತ್ರಿಗೂ, ಪ್ರಧಾನಿಯಾಗಲು ಹೊರಟಿರುವ ದೆಹಲಿಯ ವ್ಯಕ್ತಿಗೂ-ಡಿಎಲ್‌ಎಫ್‌ಗೂ ಸಂಬಂಧವೇನು ಎಂಬುದನ್ನು ಹೇಳಲಿ, ಆಗ ಸತ್ಯವೆಲ್ಲವೂ ಗೊತ್ತಾಗುತ್ತವೆ. ರಾಜ್ಯದಲ್ಲಿ ಸರ್ಕಾರ ಅವರದೇ ಇದೆಯಲ್ಲವೇ ತನಿಖೆ ಮಾಡಿಸಲಿ ಎಂದು ಸವಾಲೆಸೆದರು.

ನಾನು ಮುಖ್ಯಮಂತ್ರಿಯಾಗಿದ್ದಾಗ, ಸಿಂಗಾಪುರದ ಒಂದು ಕಂಪನಿ ಬೆಂಗಳೂರಿನ ಕುಡಿಯುವ ನೀರು ಪೂರೈಕೆ ವ್ಯವಸ್ಥೆ ನಿರ್ವಹಿಸಲು ತಯಾರಿರುವುದಾಗಿ ಹೇಳಿತ್ತು. ಅದು ಸಿಂಗಪುರದಲ್ಲಿ ಹೇಗೆ ಅನುಷ್ಠಾನಗೊಳಿಸಿದೆ ಎಂಬುದನ್ನು ನೋಡಲೆಂದು ನಾನು ಅಧಿಕಾರಿಗಳ ನಿಯೋಗ ಕರೆದೊಯ್ದಿದ್ದೆ. ಆಗ ಈ ನೈಸ್ ವ್ಯಕ್ತಿಯೂ ಬಂದಿದ್ದರು, ಅವರಿಗೆ ಏನು ಹೇಳಿ ಕಳಿಸಿದೆ ಎಂಬುದನ್ನು ಕೇಳಲಿ. ಲಾಟರಿ ನಿಷೇಧಿಸುವಾಗ, ತಮಿಳುನಾಡಿನಿಂದ ಬ್ಯಾಗ್ ಹಿಡಿದು ಕೊಂಡು ಬಂದು ನನ್ನಿಂದ ಉಗಿಸಿಕೊಂಡವರು ಯಾರೆಂದು ಕೇಳಿದರು.

» ನಾಲ್ಕನೇ ಪುಟದಲ್ಲಿ



# ಅನುದಾನ ಹಂಚಿಕೆಯಲ್ಲಿ ತಾರತಮ್ಯ ಸರಿಯಲ್ಲ

• ಪ್ರಜೋದಯ ವರದಿ

**ಅರಕಲಗೂಡು:** ಸರ್ಕಾರ ಶಾಸಕರ ಅನುದಾನ ನೀಡುವ ವಿಷಯದಲ್ಲಿ ತಾರತಮ್ಯ ಮಾಡಿದರೆ ಅಭಿವೃದ್ಧಿಗೆ ಹಿನ್ನಡೆಯಾಗುವ ಜೊತೆಗೆ ಅಗತ್ಯ ಮೂಲಸೌಕರ್ಯ ಗಳನ್ನು ಸಕಾಲಿಕವಾಗಿ ಕಲ್ಪಿಸಲು ಆಗುವುದಿಲ್ಲ ವೆಂದು ಶಾಸಕ ಎ.ಮಂಜು ಅವರು ಬೇಸರ ವ್ಯಕ್ತಪಡಿಸಿದರು.



ತಾಲ್ಲೂಕಿನ ಕಸಬಾ ಮತ್ತು ದೊಡ್ಡಮಗ್ಗೆ ಹೋಬಳಿ ವ್ಯಾಪ್ತಿಯಲ್ಲಿ 4.15 ಕೋ. ರೂ. ಹಾಗು 2 ಕೋ. ರೂ. ವೆಚ್ಚದ ಅಲ್ಪಸಂಖ್ಯಾತ ಮೊರಾರ್ಜಿ ವಸತಿ ಶಾಲೆ ಹೆಚ್ಚುವರಿ ಕಟ್ಟಡ ಅಭಿವೃದ್ಧಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ವಿರೋಧ ಪಕ್ಷದ ಶಾಸಕರಿಗೆ 25 ಕೋ.ರೂ. ಹಾಗು ಆಡಳಿತ ಪಕ್ಷದ ಶಾಸಕರಿಗೆ 50 ಕೋ. ರೂ. ಅನುದಾನ ನೀಡಿ ತಾರತಮ್ಯ ಎಸಗಿದೆ. ಈ ಬಾರಿ ಹೊಸದಾಗಿ ಮುಖ್ಯಮಂತ್ರಿಯಾಗಿ ಕಾರ್ಯಭಾರ ವಹಿಸಿಕೊಂಡಿರುವ ಡಿ.ಕೆ.ಶಿವಕುಮಾರ್ ಅವರು ಈ ತಾರತಮ್ಯ ವನ್ನು ನಿವಾರಿಸಿ ಅನುದಾನವನ್ನು ಸಮನಾಗಿ ಹಂಚಿಕೆ ಮಾಡಿ ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ನೀಡಬೇಕೆಂದು ಆಗ್ರಹಿಸಿದರು.

ಕ್ಷೇತ್ರದ ಸಮಗ್ರ ಅಭಿವೃದ್ಧಿಯ ಕನಸನ್ನು ಕಂಡು ಶಾಸಕರಾಗಿ ಪ್ರತಿಯೊಬ್ಬರು ಆಯ್ಕೆಗೊಳ್ಳುತ್ತಾರೆ. ಈ ನಿಟ್ಟಿನಲ್ಲಿ ಶಾಸಕರ ಅನುದಾನ ಸೇರಿ ಇತರ ಅವಶ್ಯಕ ಕಾಮಗಾರಿಗಳಿಗೂ ಅನುದಾನ ಬಿಡುಗಡೆಗೊಳಿಸಬೇಕೆಂದರು.

ಈಗ ಕೈಗೊಂಡಿರುವ ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಮುಗಿಸಬೇಕು. ಗುತ್ತಿಗೆದಾರರು ಗುಣಮಟ್ಟದಿಂದ ಕೆಲಸ ನಿರ್ವಹಿಸಬೇಕಿದೆ. ಕೆಲಸ ಆರಂಭಗೊಂಡ ವೇಳೆ ಆಯಾ ಗ್ರಾಮಗಳ ನಿವಾಸಿಗಳು, ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಹಾಜರಿದ್ದು ಕೆಲಸಗಳನ್ನು ಮಾಡಿಸಿಕೊಳ್ಳುವತ್ತ ಮುಂದಾಗಬೇಕೆಂದು ಮನವಿ ಮಾಡಿದರು.

**ಶಿಕ್ಷಣ ಕೇತ್ರಕ್ಕೆ ಮೊದಲ ಆದ್ಯತೆ**

ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಿದ ಪರಿಣಾಮ ನಮ್ಮ ಕ್ಷೇತ್ರದಲ್ಲಿ 7ಕ್ಕೂ ಹೆಚ್ಚು ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಪಟ್ಟಣ ಹೊರವಲಯದಲ್ಲಿನ ಅಲ್ಪ ಸಂಖ್ಯಾತ ಮೊರಾರ್ಜಿ ವಸತಿ ಶಾಲೆ ಉತ್ತಮ ಪರಿಸರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಅಲ್ಲದೆ ಪಟ್ಟಣಕ್ಕೂ ಸಮೀಪ ದಲ್ಲಿದೆ. ಇಲ್ಲಿ ಅವಶ್ಯವಿರುವ ವಸತಿ ಗೃಹಗಳು ಹಾಗು ಇತರ ಕೊಠಡಿಗಳ ನಿರ್ಮಾಣವನ್ನು 2 ಕೋ.ರೂ. ವೆಚ್ಚದಲ್ಲಿ ಮಾಡಲಾಗುತ್ತಿದೆ. ವಸತಿ ಶಾಲೆಯಲ್ಲಿ ರೈತರು, ಬಡಕುಟುಂಬದ ಮಕ್ಕಳೇ ಹೆಚ್ಚಿರುತ್ತಾರೆ. ಈ ಹಿನ್ನಲೆ ಗುಣಮಟ್ಟದಿಂದ ಕಟ್ಟಡ ನಿರ್ಮಾಣ ಮಾಡಿಕೊಡುವತ್ತ ಗುತ್ತಿಗೆದಾರ ಎಚ್ಚರಿಕೆ ವಹಿಸಬೇಕೆಂದು ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕಾರ್ಯಕ್ರಮ ಮುಗಿದ ಬಳಿಕ ಶಾಸಕರು ವಿದ್ಯಾರ್ಥಿ ಗಳೊಂದಿಗೆ ಸಮಾಲೋಚನೆ ನಡೆಸಿದರು. ಸಾಮೂಹಿಕ ಪಂಕ್ತಿಯಲ್ಲಿ ಕುಳಿತು ಮಧ್ಯಾಹ್ನದ ಊಟವನ್ನು ಸವಿದರು. ಮುಖ್ಯ ಶಿಕ್ಷಕ ಪ್ರದೀಪ್, ವಾರ್ಡನ್ ಸುನಿಲ್, ಮುಖಂಡರಾದ ನರಸೇಗೌಡ, ನಂಜುಂಡಸ್ವಾಮಿ ಇತರರು ಹಾಜರಿದ್ದರು.

## ನಿಗದಿತ ಸಮಯದೊಳಗೆ ಚೇತರಿಸಿಕೊಳ್ಳಲು ಆಟಗಾರರು ಯಂತ್ರವಲ್ಲ

• ಪ್ರಜೋದಯ ವರದಿ

**ಬೆಂಗಳೂರು:** ಬಿಸಿಸಿಐನ ಶ್ರೇಷ್ಠತಾ ಕೇಂದ್ರವನ್ನು(ಸಿಒಇ) ಬಲವಾಗಿ ಸಮರ್ಥಿಸಿಕೊಂಡ ಅದರ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್, ಆಟಗಾರರು ಚೇತರಿಸಿಕೊಳ್ಳುವಲ್ಲಿನ ವಿಳಂಬಕ್ಕೆ ಈ ಕೇಂದ್ರವನ್ನು ದೂಷಿಸಬಾರದೆಂದು ಹೇಳಿದ್ದಾರೆ.



ಪ್ರತಿ ಬಾರಿಯೂ ನಿಗದಿತ ಸಮಯದೊಳಗೆ ಚೇತರಿಸಿಕೊಳ್ಳಲು ಕ್ರಿಕೆಟಿಗರು ಯಂತ್ರಗಳಲ್ಲ ಎಂದಿದ್ದಾರೆ. ಸಿಒಇ ಮತ್ತು ತಂಡದ ಆಡಳಿತ ಮಂಡಳಿಯ ನಡುವೆ ಅತ್ಯುತ್ತಮ ಸಮನ್ವಯವಿದೆ ಎಂದು ಲಕ್ಷ್ಮಣ್ ಪ್ರತಿಪಾದಿಸಿದ್ದಾರೆ.

ಗಾಯಗೊಂಡಿರುವ ತಂಡದ ಪ್ರಮುಖ ಬೌಲರ್ ಜಸ್‌ಪ್ರೀತ್ ಬೂಮ್ರಾ, ಆಲ್ ರೌಂಡರ್‌ಗಳಾದ ಹರ್ಷಿತ್ ರಾಣಾ, ಹಾರ್ದಿಕ್ ಪಾಂಡ್ಯ, ವಾಷಿಂಗ್ಟನ್ ಸುಂದರ್ ಮತ್ತು ಅಗ್ರ ಕ್ರಮಾಂಕದ ಬ್ಯಾಟರ್ ಬಿ.ಸಾಯಿ ಸುದರ್ಶನ್ ಅವರು ಪ್ರಸ್ತುತ ಸಿಒಇನಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ.

**ಪುನಶ್ಚೇತನ ಕೇಂದ್ರ ಮಾತ್ರವಲ್ಲ, ಶ್ರೇಷ್ಠತಾ ಕೇಂದ್ರ**

ಸಿಒಇ ಕೇವಲ ಪುನಶ್ಚೇತನ ಕೇಂದ್ರವಲ್ಲ ಕ್ರಿಕೆಟಿಗರು ಶ್ರೇಷ್ಠತೆಯನ್ನು ಸಾಧಿಸಲು ಸಹಾಯ ಮಾಡುವ ದೊಡ್ಡ ಪಾತ್ರ ನಿರ್ವಹಿಸುತ್ತದೆ. ಹಾಗಾಗಿ, ಗಾಯಗಳ ವಿಷಯದಲ್ಲಿ ಅವರನ್ನು ದೂಷಿಸಲು ಇಷ್ಟಪಡುವುದಿಲ್ಲ. ದೂಷಣೆಯಿಂದ ಯಾರನ್ನೋ ಬಲಿಪಶು ಮಾಡಿದಂತಾಗುತ್ತದೆಂದು ತಿಳಿಸಿದರು.

ಸಿಒಇ ಮತ್ತು ಎರಡೂ ತಂಡಗಳ (ಮಹಿಳೆ ಮತ್ತು ಪುರುಷರ ತಂಡ) ಆಡಳಿತ ಮಂಡಳಿಗಳ ಜೊತೆ ಉತ್ತಮ ಸಮನ್ವಯತೆ ಇದೆ. ನಿರಂತರ ಸಂವಹನ ನಡೆಯುತ್ತಿದೆ. ಕಠಿಣ ಫಿಟ್ನೆಸ್ ಮಾನದಂಡಗಳನ್ನು ರೂಪಿಸಲಾಗಿದೆ. ನಿಗದಿತ ಸಮಯದೊಳಗೆ ಸಂಪೂರ್ಣ ಫಿಟ್ನೆಸ್ ಸಾಧಿಸುವುದು ಆಟಗಾರರಿಗೆ ಕಷ್ಟ ಎಂದಿದ್ದಾರೆ.

ಮಾರ್ಗಸೂಚಿಗಳನ್ನು ಅರ್ಥ ಮಾಡಿಕೊಳ್ಳುವುದು ಅತ್ಯಂತ ಮುಖ್ಯ. ತಂಡದ ಅಗತ್ಯಕ್ಕೆ ತಕ್ಕಂತೆ ಟೈಮ್‌ಲೈನ್ ವಿಧಿಸಲಾಗುತ್ತದೆ. ಅದೇ ಸಮಯಕ್ಕೆ ಸಿದ್ಧವಾಗಲು ಅದು ಯಂತ್ರವಲ್ಲ, ಮನುಷ್ಯರ ದೇಹ. ಪ್ರತಿ ಬಾರಿ ಟೈಮ್‌ಲೈನ್‌ಗೆ ಅನುಗುಣವಾಗಿ ಫಿಟ್ನೆಸ್ ಸಾಬೀತುಪಡಿಸಲು ಸಾಧ್ಯವಿಲ್ಲ. ಆಟಗಾರರು ಯಾವ ವೇಗದಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ನಿರಂತರ ಮೇಲ್ವಿಚಾರಣೆ ನಡೆಸಿ, ಅದಕ್ಕೆ ತಕ್ಕಂತೆ ತರಬೇತಿ ನೀಡಲಾಗುತ್ತದೆ. ಅದು ನಿರಂತರ ಪ್ರಕ್ರಿಯೆ ಎಂದಿದ್ದಾರೆ.

**ಬೂಮ್ರಾ ಮತ್ತು ಸುದರ್ಶನ್ ಮೇಲೆ ನಿರೀಕ್ಷೆ**

ಬೂಮ್ರಾ ಮತ್ತು ಸುದರ್ಶನ್ ಚೇತರಿಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ಈಗ ನೀವು ಬೂಮ್ರಾ ಮತ್ತು ಸಾಯಿ ಸುದರ್ಶನ್ ಅವರ ಬಗ್ಗೆ ಮಾತನಾಡುತ್ತಿದ್ದೀರಿ. ಆಯ್ಕೆಗಾರರು ಸಿಒಇ ಅನ್ನು ಸಂಪರ್ಕಿಸಿ ಆಟಗಾರರ ದೈಹಿಕ ಕ್ಷಮತೆಯ ವರದಿಯನ್ನು ಕೋರುತ್ತಾರೆ. ನಾವು ಆ ವರದಿಯನ್ನು ಸಂಗ್ರಹಿಸಿ ಆಯ್ಕೆ ಸಮಿತಿಯ ಅಧ್ಯಕ್ಷರಿಗೆ ಕಳುಹಿಸುತ್ತೇವೆ ಜೊತೆಗೆ, ಎರಡೂ ತಂಡಗಳ ಮುಖ್ಯ ತರಬೇತುದಾರರು ಮತ್ತು ಬಿಸಿಸಿಐಗೂ ಅದರ ಪ್ರತಿ ರವಾನಿಸುತ್ತೇವೆ ಎಂದಿದ್ದಾರೆ.

ಬೂಮ್ರಾ ಮತ್ತು ಸುದರ್ಶನ್ ಸ್ಟಾರ್ ಆಟಗಾರರಾಗಿದ್ದು, ಅವರ ಆಯ್ಕೆ ಬಗ್ಗೆ ಯಾವಾಗಲೂ ಗಮನ ಹೆಚ್ಚಿರುತ್ತದೆ. ಫಿಟ್ನೆಸ್ ವರದಿ ಆಧರಿಸಿಯೇ ಅವರನ್ನು ಶ್ರೀಲಂಕಾ ವಿರುದ್ಧದ ಸರಣಿಗೆ ಆಯ್ಕೆ ಮಾಡಲಾಗುತ್ತದೆ ಎಂದರು.

## ಅರಕಲಗೂಡು: ಎಸ್.ಜಾನಕಮ್ಮಗೆ ನುಡಿನಮನ



• ಪ್ರಜೋದಯ ವರದಿ

**ಅರಕಲಗೂಡು:** ಭಾರತೀಯ ಚಿತ್ರ ರಂಗದ ಇತಿಹಾಸದಲ್ಲಿ ಎಲ್ಲಾ ಭಾಷೆಗಳಲ್ಲಿಯೂ ಹಾಡುಗಳನ್ನು ಹಾಡುವ ಮೂಲಕ ಮನೆಮಾತಾಗಿದ್ದ ಜಾನಕಮ್ಮ ಅವರು ನಮ್ಮ ಭಾಷೆ, ನೆಲ, ಜಲದಲ್ಲಿ ಅಂತಿಮಯಾನ ಮುಗಿಸಿರುವುದು ಕನ್ನಡಿಗೆ ಸಿಕ್ಕ ದೊಡ್ಡ ಗೌರವ ಎಂದು ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ರವಿನಾಕಲಗೂಡು ಅವರು ತಿಳಿಸಿದರು.

ಪಟ್ಟಣದ ಕೆಎನ್‌ವಿ ಕನ್ವೆಷನ್ ಹಾಲ್‌ನಲ್ಲಿ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಗಾನಕೋಗಿಲೆ ಡಾ.ಎಸ್.ಜಾನಕಿ ಅಮ್ಮನವರ ನುಡಿನಮನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇದೇ ಮೊದಲ ಬಾರಿಗೆ ಜಿಲ್ಲೆಯ ಎಲ್ಲಾ ಕಡೆ ಜಾನಕಮ್ಮನವರಿಗೆ ಗೌರವ ಸಲ್ಲಿಸುವ ಕಾರ್ಯ ನಡೆಯುತ್ತಿರುವುದು ಅವರ ಗಾಯನ ಕಲಾಸೇವೆಗೆ ದೊರೆತ ಹೃದಯಸ್ಪರ್ಶಿ ಗೌರವ ಸಮರ್ಪಣೆ ಯಾಗಿದೆ. ಅವರ ದೇಹ ಮಣ್ಣನ್ನು ಸೇರಿರಬಹುದು. ಆದರೆ ಅವರ ಹಾಡುಗಳು ಎಷ್ಟೇ ವರ್ಷಗಳು ಕಳೆದರೂ ನಿತ್ಯವೂ ನಮಗೆ ಜೀವಂತಿಕೆಯಾಗಿಸುತ್ತವೆ. ನಮ್ಮೊಂದಿಗೆ ಹಾಡುಗಳ ಮೂಲಕ ಜೀವಿಸುತ್ತಾರೆಂದು ಹೇಳಿದರು.

ವಿಷ್ಣುಸೇನಾ ಸಮಿತಿ ಅಧ್ಯಕ್ಷ ವಿಷ್ಣುಪ್ರಕಾಶ್, ಹಿರಿಯ ಪತ್ರಕರ್ತ ಟಿ.ವಿಜಯ್‌ಕುಮಾರ್ ಅವರು ಮಾತನಾಡಿ, ಅರಕಲಗೂಡು ಎಲ್ಲಾ ಕಲೆಗಳಲ್ಲಿಯೂ ದೊಡ್ಡಕಲಾವಿದರನ್ನು ನಾಡಿಗೆ ನೀಡಿದೆ. ಇಂತಹ ಪುಣ್ಯ ಕ್ಷೇತ್ರದಲ್ಲಿ 48 ಸಾವಿರಕ್ಕೂ ಅಧಿಕ ಹಾಡುಗಳನ್ನು ಹಾಡಿ ಕನ್ನಡ ಚಿತ್ರರಂಗ, ಭಾಷೆಯನ್ನು ಮಾತ್ರ ಭಾಷೆಯನ್ನಾಗಿ ಮೈಗೂಡಿಸಿಕೊಂಡು ಸಾಂಸ್ಕೃತಿಕ ನಗರಿ ಮೈಸೂರು ಜಿಲ್ಲೆಯಲ್ಲಿ ತಮ್ಮ ಅಂತಿಮಯಾನ ಪೂರ್ಣಗೊಳಿಸಿಕೊಂಡ ಎಸ್.ಜಾನಕಮ್ಮನವರ ನುಡಿನಮನ ಕಾರ್ಯಕ್ರಮ ಹೆಚ್ಚು ಅರ್ಥಪೂರ್ಣವಾಗಿ ಆಯೋಜನೆ ಮಾಡಿರುವುದು ಜಾನಕಮ್ಮನವರ ಗೌರವವನ್ನು ಹೆಚ್ಚಿಸಿದೆ ಎಂದರು.

ಸ್ಥಳೀಯ ಕಲಾವಿದರನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸುವ ಕೆಲಸ ಶ್ಲಾಘನೀವಾಗಿದೆ.ಇಂದಿನ ಕಾರ್ಯಕ್ರಮದಲ್ಲಿ ನೂರಾರು ಸಂಖ್ಯೆಯಲ್ಲಿ ಮಹಿಳೆಯರು, ಪುರುಷರು, ಯುವಕ ಯುವತಿಯರು, ನಿವೃತ್ತ ನೌಕರರು ಪಾಲ್ಗೊಂಡು ಕಾರ್ಯಕ್ರಮಕ್ಕೆ ಅಭೂತಪೂರ್ವ ಬೆಂಬಲ ನೀಡಿರುವುದನ್ನು ಇಡೀ ಸಂಘಟನೆಗಳ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆಂದರು.

ಈ ಸಂದರ್ಭದಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆ ವೈದ್ಯ ಡಾ||ಮೋಹನ್ ಅವರು ಮಾತನಾಡಿದರು.ಕಾರ್ಯಕ್ರಮದ ನೇತೃತ್ವವನ್ನು ಪತ್ರಕರ್ತರ ಸಂಘದ ಅಧ್ಯಕ್ಷ ಪಿ.ಶಿವಕುಮಾರ್, ಪಿ.ಬಿ. ವಿರೂಪಾಕ್ಷ ಅವರು ವಹಿಸಿದ್ದರು. ವಿವಿಧ ಸಂಘಟನೆಗಳು ಮುಖಂಡರಾದ ರವಿಕುಮಾರ್, ಕೃಷ್ಣ, ಕಿರಣ್‌ಕುಮಾರ್ ಹಾಜರಿದ್ದರು. ಶಿಕ್ಷಕಿ ಗೌತಮಿ ಕಾರ್ಯಕ್ರಮ ನಿರೂಪಿಸಿದರು. ಭಾವಲಹರಿ ತಂಡದ ಕಲಾವಿದರಿಂದ ಜಾನಕಮ್ಮನವರ ಗೀತೆಗಳ ಗಾಯನ ನಡೆಯಿತು.

## ಡ್ರಗ್ಸ್‌ಮುಕ್ತ ಸಕಲೇಶಪುರ ಆಂದೋಲನ

• ಪ್ರಜೋದಯ ವರದಿ

**ಸಕಲೇಶಪುರ:** ಮಾದಕ ವಸ್ತುಗಳ ಬಳಕೆಯಿಂದ ವ್ಯಕ್ತಿಯ ಆರೋಗ್ಯದ ಜೊತೆಗೆ ಕುಟುಂಬ ಹಾಗೂ ಸಮಾಜದ ಮೇಲೂ ಗಂಭೀರ ಪರಿಣಾಮ ಉಂಟಾಗುತ್ತದೆಂದು ಈಶ ಚೈತನ್ಯ ಫೌಂಡೇಶನ್‌ನ ಸಂಸ್ಥಾಪಕ ಚೇತನ್ ಶಾಂರಾವ್ ತಿಳಿಸಿದರು.





ಪಟ್ಟಣದ ಮೌಲಾನಾ ಆಜಾದ್ ಮಾದರಿ ಶಾಲೆಯಲ್ಲಿ ರೋಟರಿ ಸಂಸ್ಥೆ ಹಾಗೂ ಡ್ರಗ್ಸ್ ಮುಕ್ತ ಸಕಲೇಶಪುರ ಆಂದೋಲನದ ಸಹಯೋಗದಲ್ಲಿ ಆಯೋಜಿಸಿದ್ದ ಮಾದಕ ವಸ್ತು ವಿರೋಧಿ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಾದಕ ವಸ್ತುಗಳ ಬಳಕೆ ಆರಂಭದಲ್ಲಿ ಕುತೂಹಲ ಅಥವಾ ಸ್ನೇಹಿತರ ಒತ್ತಡದಿಂದ ಆರಂಭವಾಗಿ, ಕ್ರಮೇಣ ವ್ಯಸನವಾಗಿ ಮಾರ್ಪಡುವ ಸಾಧ್ಯತೆಯಿದೆ. ಆದ್ದರಿಂದ ವಿದ್ಯಾರ್ಥಿಗಳು ಆರಂಭದಲ್ಲಿಯೇ ಇಂತಹ ದುಶ್ಚಟಗಳಿಂದ ದೂರವಿರಬೇಕು ಎಂದರು.

ವ್ಯಸನಕ್ಕೆ ಒಳಗಾದವರನ್ನು ಸಮಾಜದಿಂದ ದೂರ ಮಾಡುವ ಬದಲು ಅವರಿಗೆ ಸೂಕ್ತ ಚಿಕಿತ್ಸೆ, ಮಾನಸಿಕ ಬೆಂಬಲ ಹಾಗೂ ಪುನರ್ವಸತಿ ಕಲ್ಪಿಸುವ ಅಗತ್ಯವಿದೆ. ಹಾಸನದಲ್ಲಿರುವ ಈಶ ಚೈತನ್ಯ ಫೌಂಡೇಶನ್ ವ್ಯಸನಮುಕ್ತಿ ಹಾಗೂ ಮಾನಸಿಕ ಆರೋಗ್ಯ ಪುನರ್ವಸತಿ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದ್ದು, ಮಾದಕ ವ್ಯಸನದಿಂದ ಬಳಲುತ್ತಿರುವವರಿಗೆ ಚಿಕಿತ್ಸೆ ಹಾಗೂ ಪುನ ರ್ವಸತಿ ಮೂಲಕ ಸಾಮಾನ್ಯ ಜೀವನಕ್ಕೆ ಮರಳಲು ನೆರವಾಗುತ್ತಿದೆ ಎಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿ ಲೂಯಿಸ್, ಬಾಳ್ಳುಪೇಟೆ ಮಾತನಾಡಿ, ಮಾದಕ ವ್ಯಸನ ವ್ಯಕ್ತಿಯ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಹಾಳು ಮಾಡುವುದರ ಜೊತೆಗೆ ಕುಟುಂಬದ ನೆಮ್ಮದಿಗೂ ಧಕ್ಕೆ ತರುತ್ತದೆ. ವಿದ್ಯಾರ್ಥಿಗಳು ಮಾದಕ ವಸ್ತುಗಳ ಆಮಿಷಕ್ಕೆ ಒಳಗಾಗದೆ ಶಿಕ್ಷಣ, ಕ್ರೀಡೆ ಹಾಗೂ ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ರೋಟರಿ ಸಂಸ್ಥೆ ಸಕಲೇಶಪುರದ ಅಧ್ಯಕ್ಷ ರವಿಕುಮಾರ್ ಅವರು ಮಾತನಾಡಿ, ಯುವಜನರಲ್ಲಿ ಮಾದಕ ವಸ್ತುಗಳ ವಿರುದ್ಧ ಜಾಗೃತಿ ಮೂಡಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ವಿದ್ಯಾರ್ಥಿಗಳು ತಮ್ಮ ಸ್ನೇಹಿತರಲ್ಲೂ ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸಿ, ಡ್ರಗ್ಸ್ ಮುಕ್ತ ಸಕಲೇಶಪುರ ನಿರ್ಮಾಣಕ್ಕೆ ಕೈಜೋಡಿಸಬೇಕೆಂದರು.

ಡ್ರಗ್ಸ್ ಮುಕ್ತ ಸಕಲೇಶಪುರ ಆಂದೋಲನದಸಂಚಾಲಕ ಮಲ್ನಾಡ್ ಮೆಹಬೂಬ್ ಮಾತನಾಡಿ, ಸಕಲೇಶಪುರವನ್ನು ಮಾದಕ ವಸ್ತುಗಳಿಂದ ಮುಕ್ತಗೊಳಿಸುವ ಉದ್ದೇಶದಿಂದ ಜಾಗೃತಿ ಅಭಿಯಾನವನ್ನು ಮತ್ತಷ್ಟು ವಿಸ್ತರಿಸಲಾಗುವುದು. ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ಸಹಕಾರ ದೊಂದಿಗೆ ಈ ಅಭಿಯಾನವನ್ನು ಜನಾಂದೋಲನವಾಗಿರೂಪಿಸಲಾಗುವುದು ಎಂದರು. ರೋಟರಿ ಸಂಸ್ಥೆಯ ಉಪಾಧ್ಯಕ್ಷ ನಾಗೇಂದ್ರ ಪ್ರಸಾದ್, ಮೌಲಾನಾ ಆಜಾದ್ ಮಾದರಿ ಶಾಲೆಯ ಮುಖ್ಯ ಶಿಕ್ಷಕ ರಘು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



## ಪರಿಸರ ರಕ್ಷಣೆ, ಸ್ವಚ್ಛತೆಗೆ ಆದ್ಯತೆ ನೀಡಿ: ನ್ಯಾ.ಜಯಪ್ರಕಾಶ್

• ಪ್ರಜೋದಯ ವರದಿ

**ಸಕಲೇಶಪುರ:** ಪರಿಸರ ಸಂರಕ್ಷಣೆ ಹಾಗು ಸ್ವಚ್ಚತೆಗೆ ಪ್ರತಿಯೊಬ್ಬರೂ ಆದ್ಯತೆ ನೀಡಬೇಕೆಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ವಿ.ಜಯಪ್ರಕಾಶ್ ಅವರು ತಿಳಿಸಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಶನಿವಾರ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಅರಣ್ಯ ಇಲಾಖೆ, ಪುರಸಭೆ ಹಾಗು ಲೋಕೋ ಪಯೋಗಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ವನ ಮಹೋತ್ಸವ ಹಾಗು ಸ್ವಚ್ಚತಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ವನಮಹೋತ್ಸವದ ಅಂಗವಾಗಿ ನ್ಯಾಯಾಲಯದ ಆವರಣದಲ್ಲಿ ಸಸಿ ನೆಡುವ ಮೂಲಕ ಪರಿಸರ ಸಂರ ಕ್ಷಣೆಯ ಸಂದೇಶ ಸಾರಲಾಯಿತು. ಬಳಿಕ ನ್ಯಾಯಾಲಯದ ಆವರಣ ಹಾಗು ಸುತ್ತ ಮುತ್ತಲಿನ ಪ್ರದೇಶದಲ್ಲಿ ಸ್ವಚ್ಚತಾ ಕಾರ್ಯ ಕೈಗೊಳ್ಳಲಾಯಿತು.

ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಆರ್.ವಿ.ಲಕ್ಷ್ಮೀ ನರಸಿಂಹ, ಪ್ರಥಮ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಕೆ.ಎಸ್.ಶ್ರುತಿ, ವಕೀಲರ ಸಂಘದ ಅಧ್ಯಕ್ಷ ಯಶವಂತ್ ಕುಮಾರ್, ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪ, ವಲಯ ಅರಣ್ಯಾಧಿಕಾರಿ ಹೇಮಂತ್‌ಕುಮಾರ್, ಲೋಕೋಪಯೋಗಿ ಇಲಾಖೆಯ ಕಿರಿಯ ಇಂಜಿನೀಯರ್ ಅರುಣ್ ಕುಮಾರ್, ವಕೀಲರ ಸಂಘದ ಉಪಾಧ್ಯಕ್ಷ ಮಹೇಶ್, ಕಾರ್ಯದರ್ಶಿ ವಾಣಿ, ಸಹಕಾರ್ಯದರ್ಶಿ ವಿನಯ್ ಉಪಸ್ಥಿತರಿದ್ದರು.

## ರಾಷ್ಟ್ರ ಧ್ವಜದ ಕುರಿತು ಅರಿವು ಕಾರ್ಯಕ್ರಮ



• ಪ್ರಜೋದಯ ವರದಿ

**ಆಲೂರು:** ಜಿಲ್ಲಾ ಪಂಚಾಯಿತಿ, ಭಾರತ ಸೇವಾದಳ ತಾಲ್ಲೂಕು ಸಮಿತಿಯಿಂದ ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ರಾಷ್ಟ್ರ ಧ್ವಜ ಹಾರಿಸುವ ಕ್ರಮದ ಕುರಿತು ಅರಿವು ಮೂಡಿಸಲಾಯಿತು.

ಭಾರತ ಸೇವಾದಳ ವಲಯ ಸಂಘಟಕಿ ವಿ.ಎಸ್.ರಾಣಿ ಅವರು, ರಾಷ್ಟ್ರಧ್ವಜ ಮತ್ತು ರಾಷ್ಟ್ರ ಗೀತೆಯ ಮಾಹಿತಿ ಮತ್ತು ರಾಷ್ಟ್ರಗೀತೆಯ ಕಾರ್ಯಾಗಾರದಲ್ಲಿ ರಾಷ್ಟ್ರಧ್ವಜ ನೀತಿ ಸಂಹಿತೆಯ ಪ್ರಕಾರ ರಾಷ್ಟ್ರ ಧ್ವಜ ವಂದನೆ ಮತ್ತು ಧ್ವಜ ಅವರೋಹಣ ಕ್ರಮದ ಸಂಪೂರ್ಣ ಮಾಹಿತಿ ನೀಡಿದರು.

ರಾಷ್ಟ್ರ ಧ್ವಜ ಹಾರಿಸುವ ಕ್ರಮದ ಬಗ್ಗೆ ಮತ್ತು ಹಳೆಯ ರಾಷ್ಟ್ರ ಧ್ವಜಗಳ ಸಂಸ್ಕಾರಗಳ ಬಗ್ಗೆ ತಿಳಿಸಿ ಕೊಡಲಾಯಿತು.

ಅಧ್ಯಕ್ಷತೆ ವಹಿಸಿದ್ದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸುಬ್ರಹ್ಮಣ್ಯ ಶರ್ಮಾ ಅವರು ಮಾತನಾಡಿ, ಈ ಕಾರ್ಯಾಗಾರವು ಅತ್ಯಮೂಲ್ಯವಾದುದು. ರಾಷ್ಟ್ರಧ್ವಜ ರಾಷ್ಟ್ರ ಗೀತೆಯ ಮಾಹಿತಿಯನ್ನು ಸಂಪೂರ್ಣವಾಗಿ ತಿಳಿದಿರಬೇಕು. ಭಾರತ ಸೇವಾದಳದವರು ಅತ್ಯು ತ್ತಮ ಕಾರ್ಯಕ್ರಮ ನಡೆಸುತ್ತಿದ್ದಾರೆ. ಪ್ರತಿವರ್ಷ ಸಹ ನಮಗೆ ಮಾಹಿತಿ ನೀಡುತ್ತಿದ್ದಾರೆಂದರು.

ಭಾರತ ಸೇವಾದಳದ ತಾಲ್ಲೂಕು ಅಧ್ಯಕ್ಷ ಬಾಲಕೃಷ್ಣ ಮತ್ತಿತರರಿದ್ದರು.

## ಮಣ್ಣು ಪರೀಕ್ಷೆ ಕುರಿತು ರೈತರಿಗೆ ಪ್ರಾತ್ಯಕ್ಷಿಕೆ

• ಪ್ರಜೋದಯ ವರದಿ

**ಹಾಸನ:** ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮ ಅಂಗವಾಗಿ ಕಾರೆಕೆರೆ ಕೃಷಿ ಮಹಾ ವಿದ್ಯಾಲಯದ ಬಿಎಸ್ಸಿ (ಕೃಷಿ) 7ನೇ ಸೆಮಿಸ್ಟರ್ ವಿದ್ಯಾರ್ಥಿಗಳು ಹಾಗು ಮಂಗ ಳೂರಿನ ಕೆಮಿಕಲ್ಸ್ ಅಂಡ್ ಫರ್ಟಿ ಲೈಸರ್ಸ್ ಸಹಯೋಗದಲ್ಲಿ ಮಣ್ಣು ಮಾದರಿ ಸಂಗ್ರಹಣೆ ಮತ್ತು ಮಣ್ಣಿನ ಪರೀಕ್ಷೆ ಕುರಿತು ವಿಧಾನ ಪ್ರದರ್ಶನ ನಡೆಯಿತು.



ಸಂಸ್ಥೆಯ ಅಶೋಕ್ ಮತ್ತು ಉತ್ತಮ್ ಅವರು, ಜಮೀನಿನಲ್ಲಿ ವೈಜ್ಞಾನಿಕವಾಗಿ ಮಣ್ಣಿನ ಮಾದರಿ ಸಂಗ್ರಹಿಸುವ ವಿಧಾನವನ್ನು ಪ್ರಾಯೋಗಿಕವಾಗಿ ತೋರಿಸಿದರು. ಮಣ್ಣಿನ ಮಾದರಿ ಸಂಗ್ರಹಿಸುವ ಸ್ಥಳದ ಆಯ್ಕೆ, ಸರಿಯಾದ ಆಳದಲ್ಲಿ ಮಾದರಿ ತೆಗೆದುಕೊಳ್ಳುವುದು, ಗೊಬ್ಬರ ಹಾಗು ರಾಸಾಯನಿಕಗಳಿಂದ ಪ್ರಭಾವಿತ ಸ್ಥಳಗಳನ್ನು ತಪ್ಪಿಸುವುದು, ವಿವಿಧ ಸ್ಥಳಗಳಿಂದ ಸಂಗ್ರಹಿಸಿದ ಮಣ್ಣನ್ನು ಮಿಶ್ರಣ ಮಾಡಿ ಪ್ರತಿನಿಧಿ ಮಾದರಿ ತಯಾರಿಸುವುದು ಹಾಗು ಮಾದರಿಯನ್ನು ಲೇಬಲ್ ಮಾಡಿ ಪ್ರಯೋಗಾಲಯಕ್ಕೆ ಕಳುಹಿಸುವ ವಿಧಾನ ವಿವರಿಸಿದರು.

ಮಣ್ಣಿನ ಪರೀಕ್ಷೆಯಿಂದ ಮಣ್ಣಿನ, ಸಾವಯವ ಇಂಗಾಲ, ಪ್ರಮುಖ ಹಾಗು ಸೂಕ್ಷ್ಮ ಪೋಷ ಕಾಂಶಗಳ ಲಭ್ಯತೆ ಮತ್ತು ಫಲವತ್ತತೆ ತಿಳಿದುಕೊಳ್ಳಬಹುದು. ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ಗೊಬ್ಬರ ಬಳಸುವುದರಿಂದ ಉತ್ಪಾದನಾ ವೆಚ್ಚ ಕಡಿಮೆ ಮಾಡಿ ಉತ್ತಮ ಇಳುವರಿ ಪಡೆ ಯುವುದರ ಜೊತೆಗೆ ಮಣ್ಣಿನ ಆರೋಗ್ಯ ಕಾಪಾಡಬಹುದು ಎಂದು ತಿಳಿಸಲಾಯಿತು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಾದ ನಿಶಾ, ಪ್ರೀತಮ್, ಆಕಾಶ್, ಸಂದೇಶ್, ಭೂಸಪ್ಪ, ಹರ್ಷಿತಾ, ರೇಖಾ, ಎಂ.ಅನನ್ಯಾ, ತ್ರಿಷಾ, ವಿಜಯಲಕ್ಷ್ಮಿ, ರೈತರಾದ ರಂಗೇಗೌಡ, ಚರಣ್, ಗಿರೀಶ್ ತಮ್ಮಯ್ಯ ಮತ್ತಿತರರಿದ್ದರು.

## ಜೆಮಿಮಾ ರಾಡ್ರಿಗಸ್ ಏಷ್ಯಾಕಪ್‌ಗೆ ಅಲಭ್ಯ

• ಪ್ರಜೋದಯ ವರದಿ

**ನವದೆಹಲಿ:** ಭಾರತ ಮಹಿಳಾ ಕ್ರಿಕೆಟ್ ತಂಡದ ಬ್ಯಾಟರ್ ಜೆಮಿಮಾ ರಾಡ್ರಿಗಸ್ ಅವರು ಸ್ನಾಯುಸೆಳೆತದಿಂದಾಗಿ ದ ಹಂಡ್ರೆಡ್ ಟೂರ್ನಿಯಿಂದ ಹೊರನಡೆದಿದ್ದಾರೆ. ಅವರು ಮುಂಬರುವ ಮಹಿಳೆಯರ ಏಷ್ಯಾಕಪ್ ಟಿ-20 ಕ್ರಿಕೆಟ್ ಟೂರ್ನಿಯಲ್ಲಿ ಆಡುವುದು ಕೂಡ ಅನುಮಾನವಾಗಿದೆ.

ಹಂಡ್ರೆಡ್ ಟೂರ್ನಿಯಲ್ಲಿ ಅವರು ಸದರ್ನ್ ಬ್ರೇವ್ ತಂಡವನ್ನು ಪ್ರತಿನಿಧಿಸಿದ್ದರು. ಇದೀಗ ಅವರ ಬದಲಿಗೆ ಆಸ್ಟ್ರೇಲಿಯಾ ಆಲ್‌ರೌಂಡರ್ ಚಾರ್ಲಿ ನಾಟ್ ಅವರಿಗೆ ಸ್ಥಾನ ಕೊಡಲಾಗಿದೆ.

ಜೆಮಿಮಾ ರಾಡ್ರಿಗಸ್ ಅವರು ಗಾಯಗೊಂಡಿದ್ದು. ಚಿಕಿತ್ಸೆ ಗಾಗಿ ತೆರಳಿದ್ದಾರೆ. ಅವರ ಬದಲಿಗೆ ಚಾರ್ಲಿ ನಾಟ್ ಸ್ಥಾನ ಪಡೆದಿದ್ದಾರೆಂದು ಸದರ್ನ್ ಬ್ರೇವ್ ತಂಡವು ಎಕ್ಸ್‌ನಲ್ಲಿ ಸಂದೇಶ ಹಾಕಿದೆ. 25 ವರ್ಷದ ಜೆಮಿಮಾ ಅವರು ಹಂಡ್ರೆಡ್ ಟೂರ್ನಿಯಲ್ಲಿ ಒಟ್ಟು 143 ರನ್ ಗಳಿಸಿದ್ದರು.

## ತೋಟಗಾರಿಕೆ ಪಿತಾಮಹ ಮರಿಗೌಡರ ಜನ್ಮ ದಿನ



**ಬೇಲೂರು:** ಪಟ್ಟಣದ ತೋಟಗಾರಿಕೆ ಇಲಾಖೆ ಆವರಣದಲ್ಲಿ ತೋಟಗಾರಿಕೆ ಕ್ಷೇತ್ರದ ಪಿತಾಮಹ ಡಾ.ಮರಿಗೌಡ ಅವರ ಜನ್ಮದಿನದ ಅಂಗವಾಗಿ ಇಲಾಖೆ ಅಧಿಕಾರಿಗಳು ಸಸಿ ನೆಟ್ಟು ಹಾಗು ಹಣ್ಣಿನ ಗಿಡಗಳನ್ನು ವಿತರಿಸುವ ಮೂಲಕ ದಿನಾಚರಣೆ ಆಚರಿಸಿದರು.

ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಕೆ.ಎಸ್.ಮಧುಕುಮಾರ್ ಅವರು ಮಾತನಾಡಿ, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯ. ನಾವು ನೆಡುವ ಒಂದೊಂದು ಗಿಡವು ನಮ್ಮ ಮುಂದಿನ ಪೀಳಿಗೆಗೆ ಸಂದೇಶ ನೀಡುವಂತಿರಬೇಕು. ತೋಟಗಾರಿಕೆ ಕ್ಷೇತ್ರದ ಪಿತಾಮಹ ಡಾ. ಮರಿಗೌಡರ ಜನ್ಮ ದಿನದ ಹಿನ್ನಲೆಯಲ್ಲಿ ರೈತರಿಗೆ ಹಣ್ಣಿನ ಗಿಡಗಳನ್ನು ವಿತರಿಸಿ ಮತ್ತು ಕಚೇರಿ ಆವರಣದಲ್ಲಿ ಗಿಡಗಳನ್ನು ನೆಡುತ್ತಿದ್ದೇವೆ. ಈ ಮೂಲಕ ಪರಿಸರಕ್ಕೆ ಕೊಡುಗೆ ನೀಡುವಂತೆ ಜಾಗೃತಿ ಮೂಡಿಸಲಾಗುತ್ತಿದೆ. ಜೊತೆಗೆ ಎಲ್ಲರೂ ಎಲ್ಲೆಲ್ಲಿ ಸ್ಥಳಾವಕಾಶ ಸಿಗುತ್ತದೆಯೋ ಅಲ್ಲಿ ಸಾಧ್ಯವಾದಷ್ಟು ಗಿಡಗಳನ್ನು ನೆಡುವುದರ ಜೊತೆಗೆ ಮರ, ಕಾಡು ರಕ್ಷಣೆಗೆ ಆದ್ಯತೆ ನೀಡಬೇಕೆಂದರು.

ಬೇಲೂರು-ಹಳೇಬೀಡು ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಡಗೂರು ಬಸವರಾಜು, ತೋಟಗಾರಿಕಾ ಇಲಾಖೆ ಹಿರಿಯ ಸಹಾಯಕ ಅಧಿಕಾರಿ ಎಂ.ಆರ್.ಲೋಹಿತ್, ಕ್ಷೇತ್ರಾಧಿಕಾರಿ ಜಗದೀಶ್, ತಾಲ್ಲೂಕು ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಚಂದ್ರಶೇಖರ್ ಪಡವಳಲು ಹಾಗು ಇತರರಿದ್ದರು.

## ಕಾಳಿಕಾಂಬ ಕಮಠೇಶ್ವರ ದೇಗುಲದಲ್ಲಿ ರಂಗ ಪೂಜೆ

• ಪ್ರಜೋದಯ ವರದಿ

**ಹಾಸನ:** ನಗರದ ಶ್ರೀ ಕ್ಷೇತ್ರ ಕಾಳಿಕಾಂಬ ಕಮಠೇಶ್ವರ ದೇವಾಲಯದಲ್ಲಿ ಆಷಾಢ ಮಾಸದ ಕಡೆಯ ಶುಕ್ರವಾರದ ಅಂಗವಾಗಿ ರಂಗ ಪೂಜೆ ಸೇವೆ ಸಲ್ಲಿಸಲಾಯಿತು.



ಪುರೋಹಿತ ಎನ್. ಪ್ರವೀಣ್ ಕುಮಾರ್ ಅವರು ಮಾತನಾಡಿ, ದೇವರ ಸನ್ನಿಧಿಯಲ್ಲಿ ರಂಗವನ್ನು ಸಿದ್ಧಪಡಿಸಿ ಶಕ್ತಿ ಸ್ವರೂಪಿಣಿಯಾದ ದೇವಿಯನ್ನು ಆಹ್ವಾನಿಸಿ ಭಕ್ತಿ, ಶ್ರದ್ಧೆ ಮತ್ತು ಸಮರ್ಪ ಣೆಯೊಂದಿಗೆ ದೀಪ ನೈವೇದ್ಯಗಳೊಂದಿಗೆ ನಡೆಯುವ ಮಂಗಳಕರ ಆರಾಧನೆಯೇ ರಂಗಪೂಜೆ ಸೇವೆ ಎಂದರು.

ಈ ಮಾಸದಲ್ಲಿ ಶಿವಶಕ್ತಿಯ ಸ್ವರೂಪವಾದ ದೇವಿಯ ಆರಾಧನೆಯಿಂದ ಶುಭ ಫಲಗಳನ್ನು ಪಡೆಯಬಹುದು. ಆಷಾಢ ಮಾಸದ ಕಡೆಯಶುಕ್ರವಾರ ವಿಶೇಷವಾಗಿ ಲಕ್ಷ್ಮಿಯು ನಮ್ಮ ಬೇಡಿಕೆ ಗಳನ್ನು ಆಲಿಸುತ್ತಾಳೆಂದು ಶಾಸ್ತ್ರಗಳಲ್ಲಿ ಹೇಳಲಾಗಿದೆ ಎಂದರು.

ವಿಶೇಷ ಅಲಂಕಾರ ಸಹಿತ ಪೂಜೆ, ಪ್ರಾಕಾರೋತ್ಸವ ಸೇವೆ, ರಂಗಪೂಜೆ ಮತ್ತು ಅನ್ನ ಸಂತರ್ಪಣೆ ಸೇವಾರ್ಥದಾರರಾದ ಹೆಚ್.ಎಂ. ಜ್ಯೋತಿ ಮತ್ತು ಹೆಚ್.ಕೆ.ಸತೀಶ್ ದಂಪತಿ ಯನ್ನು ಕ್ಷೇತ್ರದ ವತಿಯಿಂದ ಸಾಂಪ್ರದಾಯಿಕವಾಗಿ ಗೌರವಿಸಲಾಯಿತು. ಮಹಿಳೆಯರಿಂದ ಭಜನೆ ಹಾಗು ಕು. ವಿಸ್ಮಿತ ಮತ್ತು ಹೆಚ್.ಎ.ಹಿಮ ಭರತನಾಟ್ಯ ಪ್ರದರ್ಶಿಸಿದರು.

ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ಹೆಚ್.ವಿ. ಹರೀಶ್, ನಿರ್ದೇಶಕ ಜಿ.ಎಸ್.ಜಯರಾಜು, ವೈ. ಮಧುಕುಮಾರ್, ಪೂಜಾ ಸಮಿತಿಯ ಅಧ್ಯಕ್ಷ ಹೆಚ್.ಕೆ.ಆನಂದ್, ತಾಲ್ಲೂಕು ವಿಶ್ವಕರ್ಮ ಸಮಾಜದ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್. ಆನಂದ್, ಸಹ ಕಾರ್ಯದರ್ಶಿ ಎಂ.ಟಿ. ಸುರೇಶ್, ಖಜಾಂಚಿ ಹೆಚ್.ಎಂ.ಮಂಜು, ನಿರ್ದೇಶಕರಾದ ಬಿ.ಲೋಕೇಶ್, ಹೆಚ್.ಹೆಚ್.ಶ್ರೀನಿವಾಸ್, ರುಕ್ಮಾಂಗದಚಾರ್, ಎಂ.ಸುದೇವನ್ ಮತ್ತು ಮಹಿಳಾ ಮಂಡಳಿ ಅಧ್ಯಕ್ಷೆ ಅನಿಲ ಪದ್ಮನಾಭ ಮತ್ತಿತರರು ಹಾಜರಿದ್ದರು.

## ಸಾಹಿತ್ಯದ ಮೂಲಕ ಸೌಹಾರ್ದತೆ, ಶಾಂತಿಯ ಸಂದೇಶ ಸಾರಬೇಕು

• ಪ್ರಜೋದಯ ವರದಿ

**ಸಕಲೇಶಪುರ:** ವಿದ್ಯಾರ್ಥಿಗಳು ಸಾಹಿತ್ಯ, ಶಿಕ್ಷಣ ಹಾಗೂ ಸೃಜನಶೀಲ ಚಟುವಟಿಕೆ ಮೂಲಕ ಸಮಾಜದಲ್ಲಿ ಸೌಹಾರ್ದತೆ, ಪ್ರೀತಿ ಮತ್ತು ಶಾಂತಿಯ ಸಂದೇಶ ಸಾರುವ ಜವಾಬ್ದಾರಿಯುತ ಯುವಕರಾಗಿ ಬೆಳೆಯಬೇಕೆಂದು ನ್ಯಾಯವಾದಿ ಅನ್ವಾದ್ ಪಾಳ್ಯ ಅವರು ಹೇಳಿದರು.



ಜಿಲ್ಲಾ ಎಸ್‌ಎಸ್‌ಎಫ್ ಘಟಕದ ಆಶ್ರಯದಲ್ಲಿ ಹಲಸುಲಿಗೆ ಗ್ರಾಮದ ಹಜ್ರತ್ ಸೈಯದ್ ಜಲಾಲುದ್ದಿನ್ ದರ್ಗಾದ ಆವರಣದಲ್ಲಿ ಆಯೋಜಿಸಿದ್ದ 14ನೇ ಸಾಹಿತ್ಯೋತ್ಸವದಲ್ಲಿ ಮಾತನಾ ಡಿದ ಅವರು, ವಿದ್ಯಾರ್ಥಿಗಳು ನಾಳಿನ ಸಮಾಜದ ನಿರ್ಮಾತೃಗಳಾಗಿದ್ದು, ರಾಷ್ಟ್ರ, ರಾಜ್ಯ, ಗ್ರಾಮ ಹಾಗೂ ನಗರಗಳ ಅಭಿವೃದ್ಧಿಗೆ ಕೊಡುಗೆ ನೀಡುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಸಮಾಜದಲ್ಲಿ ಧರ್ಮದ ಹೆಸರಿನಲ್ಲಿ ದ್ವೇಷ ಮೂಡಿಸುವ ಬದಲು ಪ್ರೀತಿ, ಸೌಹಾರ್ದತೆ ಹಾಗೂ ಸಾಮರಸ್ಯವನ್ನು ಬೆಳೆಸುವ ಕೆಲಸವನ್ನು ಯುವಕರು ಮಾಡಬೇಕು. ಎಸ್ಎಸ್ಎಫ್‌ಕಳೆದ ಮೂರೂವರೆ ದಶಕಗಳಿಂದ ಯುವಜನರಲ್ಲಿ ಸೌಹಾರ್ದತೆ ಮತ್ತು ಶಾಂತಿಯ ಸಂದೇಶವನ್ನು ಬಿತ್ತುವ ಕಾರ್ಯ ಮಾಡುತ್ತಿದೆ. ಮಾದಕ ವ್ಯಸನ ಹಾಗೂ ವರದಕ್ಷಿಣೆ ಪದ್ಧತಿಯ ವಿರುದ್ಧವೂ ಹಲವು ಜಾಗೃತಿ ಕಾರ್ಯಕ್ರಮಗಳು ಮತ್ತು ಆಂದೋಲನಗಳನ್ನು ನಡೆಸಿದೆ ಎಂದು ಹೇಳಿದರು.

ಧರ್ಮಪಂಡಿತ ಷರೀಫ್ ಮಿಸ್ಬಾಹಿ ಮಾತನಾಡಿ, ಮಾಧ್ಯಮಗಳಲ್ಲಿ ಧರ್ಮಗಳ ಕುರಿತು ಚರ್ಚಿಸುವ ಸಂದರ್ಭದಲ್ಲಿ ಸಂಬಂಧಪಟ್ಟ ಧರ್ಮದ ನೈಜ ಸಂದೇಶ ಹಾಗೂ ಮೂಲ ಗ್ರಂಥಗಳ ಅರಿವು ಹೊಂದಿರುವವರ ಅಭಿಪ್ರಾಯಗಳಿಗೆ ಆದ್ಯತೆ ನೀಡಬೇಕು. ಇಸ್ಲಾಂ ಧರ್ಮದ ಕುರಿತು ತಿಳಿದುಕೊಳ್ಳಲು ಕುರಾನ್ ಮತ್ತು ಹದೀಸ್‌ಗಳ ಆಳವಾದ ಜ್ಞಾನ ಹೊಂದಿರುವ ವಿದ್ವಾಂಸರ ಮಾರ್ಗದರ್ಶನ ಅಗತ್ಯ ಎಂದರು.

ಎಸ್‌ಎಸ್‌ಎಫ್ ಆಯೋಜಿಸುವ ಸಾಹಿತ್ಯೋತ್ಸವಗಳಲ್ಲಿ ಭಾಷಣ, ಹಾಡು, ಕವನ, ಲೇಖನ ಹಾಗೂ ಪ್ರಬಂಧಗಳ ಮೂಲಕ ಯಾವುದೇ ಸಮುದಾಯಕ್ಕೆ ನೋವುಂಟು ಮಾಡುವ ಅಥವಾ ಯಾವುದೇ ವರ್ಗವನ್ನು ಹೀಯಾಳಿಸುವ ಸಂದೇಶಗಳಿಗೆ ಅವಕಾಶ ನೀಡುವು ದಿಲ್ಲ. ದೇಶದ ವಿವಿಧ ಭಾಗಗಳಲ್ಲಿ ನಡೆಯುವ ಸಾಹಿತ್ಯೋತ್ಸವಗಳ ಪ್ರಮುಖ ಆಶಯ ಶಾಂತಿ, ಸೌಹಾ ರ್ದತೆ, ಸಹಿಷ್ಣುತೆ ಮತ್ತು ಮಾನವೀ ಯತೆಯನ್ನು ಬೆಳೆಸುವುದಾಗಿದೆ ಎಂದು ಹೇಳಿದರು.

ಯುವಜನರು ಶೈಕ್ಷಣಿಕ ಹಾಗೂ ಸೃಜನಾತ್ಮಕ ಚಟುವಟಿಕೆ ಮೂಲಕ ಸಮಾಜಕ್ಕೆ ತಮ್ಮ ಕೊಡುಗೆ ನೀಡಬೇಕು. ಸಂಘಟನೆಯ ಕಾರ್ಯಕ್ರಮಗಳಲ್ಲಿ ಶಾಂತಿ, ಮಾನವೀಯತೆ ಮತ್ತು ಸಹಬಾಳ್ವೆಯ ಸಂದೇಶವನ್ನು ಸಾರುವ ಮೂಲಕ ಸಮಾಜದಲ್ಲಿ ಉತ್ತಮ ವಾತಾವರಣ ನಿರ್ಮಿಸಲು ಮುಂದಾಗಬೇಕೆಂದರು.

ಸ್ಪರ್ಧೆಯಲ್ಲಿ ಸಕಲೇಶಪುರ ಘಟಕವು ಮೊದಲ ಸ್ಥಾನ ಗಳಿಸಿದರೆ, ದ್ವಿತೀಯ ಸ್ಥಾನವನ್ನು ಹಾಸನ ಘಟಕ ಗಳಿಸಿತು. ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಘಟಕದ ವಿದ್ಯಾರ್ಥಿಗಳು ಭಾಷಣ, ಕವನ, ಹಾಡು, ಲೇಖನ ಹಾಗೂ ಪ್ರಬಂಧ ಸೇರಿ ವಿವಿಧ ಸಾಹಿತ್ಯಿಕ ಸ್ಪರ್ಧೆಗಳಲ್ಲಿ ಭಾಗವಹಿಸಿದರು.

ಮರ್ಷಾದ್ ತಂಙಳ್, ಎಸ್‌ಕೆಯು ಅಧ್ಯಕ್ಷರಾದ ಸೈದಲವಿ ಸಖಾಫಿ, ಎಸ್ಎಸ್ಎಫ್ ಜಿಲ್ಲಾಧ್ಯಕ್ಷ ರಫೀಕ್ ಮದನಿ, ಆನೆಮಹಲ್ ಹಸೈನಾರ್, ಹಲಸುಲಿಗೆ ಮಸೀದಿಯ ಅಧ್ಯಕ್ಷ ಶೇಕ್ ಅಹಮದ್, ಕುಡಗರಹಳ್ಳಿ ಮಸೀದಿಯ ಅಧ್ಯಕ್ಷ ಇಸ್ಮಾಯಿಲ್ ಕುಡಗರಹಳ್ಳಿ, ಎಸ್‌ಎಸ್‌ಎಫ್‌ನ ವಿವಿಧ ಘಟಕಗಳ ಪದಾಧಿಕಾರಿಗಳು, ಕಾರ್ಯಕರ್ತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಇದ್ದರು.

## ಸಾವಯವ ಕೃಷಿ ಕುರಿತು ವಿದ್ಯಾರ್ಥಿಗಳಿಂದ ಅರಿವು



• ಪ್ರಜೋದಯ ವರದಿ

**ಹಾಸನ:** ಕಾರೆಕರೆ ಕೃಷಿ ಮಹಾವಿದ್ಯಾಲಯದ ಬಿಎಸ್‌ಸಿ ಅಂತಿಮ ವರ್ಷದ ವಿದ್ಯಾರ್ಥಿಗಳು ಚೌಡೇನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ಸಾವಯವ ಕೃಷಿ ಹಾಗು ಅದರ ಮಹತ್ವ ಕುರಿತು ರೈತರಿಗೆ ಅರಿವು ಮೂಡಿಸಿದರು.

ಜೀವಾಮೃತ ತಯಾರಿಕೆಯ ವಿಧಾನ ಪ್ರಾತ್ಯಕ್ಷಿಕೆ ನಡೆಸಲಾಯಿತು. ಜೀವಾಮೃತ ತಯಾರಿಕೆಗೆ ಅಗತ್ಯವಿರುವ ಪದಾರ್ಥ, ಅವುಗಳ ಪ್ರಮಾಣ, ಪ್ರತಿಯೊಂದು ಪದಾರ್ಥದ ಪಾತ್ರ ಹಾಗು ತಯಾರಿಕೆಯ ಹಂತಗಳನ್ನು ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ವಿವರಿಸಿದರು.

ಅಲ್ಲದೆ, ಜೀವಾಮೃತದ ಬಳಕೆ ಹಾಗು ರಾಸಾಯನಿಕ ಗೊಬ್ಬರಗಳಿಗೆ ಪರ್ಯಾಯವಾಗಿ ಸಾವಯವ ಕೃಷಿಯಲ್ಲಿ ಅದರ ಮಹತ್ವದ ಕುರಿತು ಮಾಹಿತಿ ನೀಡಿದರು.

ಮುಂದಿನ ಕಾರ್ಯಕ್ರಮಗಳಲ್ಲಿ ಜೈವಿಕ ಗೊಬ್ಬರ, ಜೈವಿಕ ಕೀಟನಾಶಕ, ಬೆಳೆ ಪರಿವರ್ತನೆ ಹಾಗು ಹಸಿರೆಲೆ ಗೊಬ್ಬರ ಸೇರಿ ಸಾವಯವ ಕೃಷಿ ಅಂಶಗಳ ಕುರಿತು ರೈತರಿಗೆ ಮಾಹಿತಿ ನೀಡುವುದಾಗಿ ವಿದ್ಯಾರ್ಥಿಗಳು ತಿಳಿಸಿದರು.

# ಮಾದಿಗ ಸಮುದಾಯ ಭವನಕ್ಕೆ 25 ಲ.ರೂ. ನೆರವು

## ಸಂಸದ ಶ್ರೇಯಸ್ ಪಟೇಲ್ ಘೋಷಣೆ | ಪ್ರತಿಭಾ ಪುರಸ್ಕಾರ, ನಿವೃತ್ತ ನೌಕರರಿಗೆ ಸನ್ಮಾನ

• ಪ್ರಜೋದಯ ವರದಿ

**ಹಾಸನ:** ಮಾದಿಗ ಸಮುದಾಯದ ಬಹು ದಿನಗಳ ಕನಸಾದ ಸಮುದಾಯ ಭವನ ನಿರ್ಮಾಣಕ್ಕೆ ಜಿಲ್ಲಾಡಳಿತ 10 ಗುಂಟೆ ಜಮೀನು ನೀಡಿದ್ದು, ಕಟ್ಟಡ ನಿರ್ಮಾಣಕ್ಕೆ ಹಂತ ಹಂತವಾಗಿ 25 ಲಕ್ಷ ರೂ. ನೀಡುತ್ತೇನೆಂದು ಸಂಸದ ಶ್ರೇಯಸ್ ಪಟೇಲ್ ಅವರು ಘೋಷಿಸಿದರು.



ಜಿಲ್ಲಾ ಬಾಬು ಜಗಜೀವನರಾಮ್ ಕ್ಷೇಮಾಭಿವೃದ್ಧಿ ಸಂಘದಿಂದ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಭಾನುವಾರ ನಡೆದ ಪ್ರತಿಭಾ ಪುರಸ್ಕಾರ ಮತ್ತು ನಿವೃತ್ತ ನೌಕರರಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸಮುದಾಯದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲವಾಗುವಂತೆ ತರಬೇತಿ ಕೇಂದ್ರ ಸ್ಥಾಪನೆಗೆ ಮುಂದಾಗಿರುವುದು ಸಂತಸದ ವಿಚಾರ. ಸಮುದಾಯದ ನಾಯಕ ಕೆ.ಹೆಚ್.ಮುನಿಯಪ್ಪ ಅವರು ಸಮಾಜದ ಏಳಿಗೆಗೆ ಶ್ರಮಿಸುವಂತೆ ನನಗೆ ಸೂಚಿಸಿದ್ದಾರೆ. ನಾನು ಯಾವಾಗಲೂ ನಿಮ್ಮ ಪರವಾಗಿ ರುತ್ತೇನೆಂದರು.

ದೇಶದ ಮೊದಲ ಉಪಪ್ರಧಾನಿ ಬಾಬು ಜಗಜೀವನ್ ರಾಮ್ ಹಾಗು ಡಾ. ಬಿ.ಆರ್. ಅಂಬೇಡ್ಕರ್ ಸಮಾಜದ ಎರಡು ಕಣ್ಣು. ಎಲ್ಲಾ ಸಮುದಾಯಗಳ ಶ್ರೇಯೋಭಿವೃದ್ಧಿಗೆ ಅವರು ಶ್ರಮಿಸಿದ್ದಾರೆ. ನಾನು ಸಂಸದನಾಗಿ ಈ ಮಟ್ಟಕ್ಕೆ ಬೆಳೆಯಲು ಅಂಬೇಡ್ಕರ್ ಅವರ ಸಂವಿಧಾನವೇ ಕಾರಣ. ಯುವ ಪೀಳಿಗೆ ಸಂವಿಧಾನ ತಿಳಿಯಬೇಕು. ಪವಿತ್ರ ಗ್ರಂಥದ ಬಗ್ಗೆ ಅರಿವು ಹೊಂದಬೇಕು. ನಾವು ಏನೇ ಸಾಧನೆ ಮಾಡಬೇಕೆಂದರೂ ಶಿಕ್ಷಣದಿಂದ ಮಾತ್ರ ಸಾಧ್ಯ ಎಂಬುದನ್ನು ಎಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕೆಂದರು.

### ಮೀಸಲಾತಿ ಇರಬೇಕು

ಮಾಜಿ ಶಾಸಕ ಪ್ರೀತಮ್ ಜೆ. ಗೌಡ ಅವರು ಮಾತನಾಡಿ, ಯಾರೂ ಕೂಡ ಇಂತಹದೇ ಜಾತಿಯಲ್ಲಿ ಹುಟ್ಟಬೇಕೆಂದು ಅರ್ಜಿ ಸಲ್ಲಿಸಿರುವುದಿಲ್ಲ. ಆಚರಣೆ, ಪದ್ಧತಿಗಳು ನಾವು ಬೆಳೆಯುತ್ತಾ ಗೊತ್ತಾಗುತ್ತದೆ. ಸಾವಿರಾರು ವರ್ಷಗಳಿಂದ ದಲಿತ ಸಮುದಾಯ ಶೋಷಣೆ ಅನುಭವಿಸಿಕೊಂಡು ಬಂದಿದೆ. ಅವರು ಸ್ವಾಭಿಮಾನದ ಬದುಕಿಗಾಗಿ ಮೀಸಲಾತಿ ಕೇಳುವುದರಲ್ಲಿ ಯಾವ ತಪ್ಪಿಲ್ಲ. ದೇಶ ಸ್ವಾತಂತ್ರ್ಯ ಸಾಧಿಸಿ 80 ವರ್ಷ ಕಳೆದರೂ ಸಮಾನತೆ ಇನ್ನೂ ಸಾಧ್ಯವಾಗಿಲ್ಲ. ನೂರಾರು ವರ್ಷಗಳ ತಪ್ಪನ್ನು ಕೇವಲ ಎಂಟು ದಶಕಗಳಲ್ಲಿ ಸರಿಪಡಿಸಲು ಸಾಧ್ಯವಿಲ್ಲ. ಹಾಗಾಗಿ ಮೀಸಲಾತಿ ಸಮರ್ಪಕವಾಗಿ ಜಾರಿಯಾಗಬೇಕೆಂದು ಆಗ್ರಹಿಸಿದರು.

ಮಾದಿಗ ಸಮುದಾಯ ಇನ್ನು ಆರ್ಥಿಕ, ಸಾಮಾಜಿಕವಾಗಿ ಹಿಂದುಳಿದಿದೆ. ಆರ್ಥಿಕವಾಗಿ ಸದೃಢರಾದರೆ ಮಾತ್ರ ಸಮಾಜವನ್ನು ಮೇಲಕ್ಕೆತ್ತಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಕೇವಲ ವಿದ್ಯೆ ಕಲಿತ ಮಾತ್ರಕ್ಕೆ ಎಲ್ಲಾ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ಆರ್ಥಿಕವಾಗಿ ಸದೃಢರಾಗುವತ್ತ ಗಮನ ಹರಿಸಬೇಕು. ಸಮಾಜದ ವ್ಯಕ್ತಿ ಒಳ್ಳೆಯ ಉದ್ಯೋಗ ಪಡೆದು ತನ್ನ ಸಂಬಳದಲ್ಲಿ ಸಮುದಾಯದ ಮತ್ತೊಬ್ಬ ವಿದ್ಯಾರ್ಥಿಗೆ ನೆರವಾಗಬೇಕು. ಗ್ರಾಮದ ಪ್ರತಿಯೊಬ್ಬರು ಈ ಸಂಕಲ್ಪ ಮಾಡಿದರೆ ಕೆಲವೇ ವರ್ಷಗಳಲ್ಲಿ ಮಾದಿಗ ಸಮುದಾಯ ಸರ್ವ ಕ್ಷೇತ್ರಗಳಲ್ಲೂ ಅಭಿವೃದ್ಧಿ ಹೊಂದಲು ಸಾಧ್ಯವೆಂದರು.

ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಬೇಕು. ಶಿಕ್ಷಣ ಕೇವಲ ಅಂಕಪಟ್ಟಿಗೆ ಸೀಮಿತವಾಗದೆ ಕೆಲಸ ಕಟ್ಟಿಕೊಳ್ಳಲು ನೆರವಾಗಬೇಕು. ಸರ್ಕಾರದಿಂದಲೇ ನಮ್ಮ ಜೀವನ ಸುಧಾರಿಸಬೇಕೆಂದು ಬಯಸುವುದು ತಪ್ಪು. ರಾಜ್ಯದಲ್ಲಿ ಕಾಂಗ್ರೆಸ್, ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಇದೆ. ಎರಡೂ ಸರ್ಕಾರಗಳಿಂದಲೂ ಸಮಾಜದ ಸಮಗ್ರ ಅಭಿವೃದ್ಧಿ ಸಾಧ್ಯವಿಲ್ಲ. 140 ಕೋಟಿ ಜನಸಂಖ್ಯೆಯ ದೇಶ ನಮ್ಮದಾಗಿರುವುದರಿಂದ ವ್ಯಕ್ತಿಗತವಾಗಿ ಸಹಾಯ ಮಾಡುವುದು ಅಸಾಧ್ಯ. ಯಾವ ಸರ್ಕಾರವು ಜೀವನ ಕಟ್ಟಿಕೊಳ್ಳಲು ಹಣ ಕೊಡುವುದಿಲ್ಲ. ನಮ್ಮ ಏಳಿಗೆಗೆ ನಾವೇ ಶಿಲ್ಪಿಗಳಾಗಬೇಕೆಂದು ಸಲಹೆ ನೀಡಿದರು.

> **ಕೇವಲ 5 ವರ್ಷದಲ್ಲಿ ಹಾಸನ ನಗರವನ್ನು ಅಭಿವೃದ್ಧಿ ಪಥದತ್ತ ಮುನ್ನಡೆಸಿದ ಕೀರ್ತಿ ಪ್ರೀತಮ್ ಗೌಡರಿಗೆ ಸಲ್ಲುತ್ತದೆ. ಸಹೋದರನಾಗಿ ಅವರ ಭವಿಷ್ಯ ದಿನಗಳು ಒಳ್ಳೆಯದಾಗಿರಲಿ ಎಂದು ಪ್ರಾರ್ಥಿಸುತ್ತೇನೆ.**
> **-ಶ್ರೇಯಸ್ ಪಟೇಲ್, ಸಂಸದ**

ಒಳಮೀಸಲಾತಿ ಹೋರಾಟಗಾರ ಭಾಸ್ಕರ್ ಪ್ರಸಾದ್ ಅವರು ಮಾತನಾಡಿ, ಕಡಿಮೆ ಅಂಕ ಗಳಿಸಿದ ಮಾತ್ರಕ್ಕೆ ಆತ್ಮಹತ್ಯೆ ಮಾಡಿಕೊಳ್ಳುವ ಮಕ್ಕಳ ಮನಸ್ಥಿತಿಯನ್ನು ಬದಲಿಸುವ ಕೆಲಸ ಮೊದಲು ಆಗಬೇಕು. ಜೀವನಕ್ಕೆ ಅಂಕಗಳು ಮಾನದಂಡ ಆಗಬಾರದು ಎಂದರು.

### ಮೀಸಲಾತಿ ನಮ್ಮ ಹಕ್ಕು

ಮೀಸಲಾತಿ ಪಡೆಯುವುದು ನಮ್ಮ ಹಕ್ಕು ಎಂಬ ಸತ್ಯವನ್ನು ಎಲ್ಲರೂ ಅರಿಯಬೇಕು. ಮೀಸಲಾತಿ ವಿರೋಧಿಸಿ ಸಾಮಾಜಿಕ ಜಾಲತಾಣಗಳಲ್ಲಿ ಅಭಿಯಾನ ಆರಂಭಿಸಿದವರಿಗೆ ವಾಸ್ತವಾಂಶ ಗೊತ್ತಿಲ್ಲ.

1902ರಲ್ಲಿ ಶಾಹೂ ಮಹಾರಾಜರು ಮೀಸಲಾತಿ ಜಾರಿಗೊಳಿಸಿದರು. ದೇಶದಲ್ಲಿ ಬ್ರಾಹ್ಮಣರಲ್ಲದ ಇತರ 3600 ಹಿಂದುಳಿದ ಹಾಗು 1600 ಪರಿಶಿಷ್ಟ ಜಾತಿಗಳಿವೆ. ಇವರಿಗೆ ಶೇ. 50 ರಷ್ಟು ಮೀಸಲಾತಿಯನ್ನು ಶಾಹೂ ಮಹಾರಾಜರು ಘೋಷಿಸಿದರು. ಅದರನ್ವಯ ಮೀಸಲಾತಿಯನ್ನು ಮೊದಲು ಅನುಭವಿಸಿದವರು ಹಿಂದುಳಿದ ವರ್ಗದವರು ಹೊರತು ಹೊಲೆ ಮಾದಿಗರಲ್ಲ ಎಂಬ ಸತ್ಯ ಭವಿಷ್ಯದ ಪೀಳಿಗೆಗೆ ಗೊತ್ತಾಗಬೇಕೆಂದರು.

ರಾಜ್ಯದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೀಸಲಾತಿಯನ್ನು ಪ್ರಥಮ ಬಾರಿಗೆ ಜಾರಿಗೆ ತಂದರು. ಅದರ ಮೊದಲ ಫಲಾನುಭವಿ ಸರ್. ಎಂ. ವಿಶ್ವೇಶ್ವರಯ್ಯ. ಮೈಸೂರಿನಲ್ಲಿ 1905ರ ಹೊತ್ತಿಗೆ ಮೈಸೂರಿನಲ್ಲಿ ಮೀಸಲಾತಿ ವಿಚಾರವಾಗಿ ಚಳವಳಿ ಆರಂಭವಾಯಿತು. ಆಯಕಟ್ಟಿನ ಸ್ಥಾನಗಳಲ್ಲಿ ತಮಿಳು ಬ್ರಾಹ್ಮಣರು ಪ್ರಾಬಲ್ಯ ಮೆರೆಯುತ್ತಿದ್ದಾರೆಂದು ಕರ್ನಾಟಕದ ಬ್ರಾಹ್ಮಣರು ಹೋರಾಟ ಮಾಡಿದರು. ಅದರ ಫಲವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮೀಸಲಾತಿಯಲ್ಲಿ ಆಮೂಲಾಗ್ರ ಬದಲಾವಣೆ ತಂದಿದ್ದಾರೆಂದು ವಿವರಿಸಿದರು.

ರಾಜ್ಯದಲ್ಲಿ ಒಳಮೀಸಲಾತಿ ಕುರಿತು ಸಾಕಷ್ಟು ಹೋರಾಟಗಳು ನಡೆಯುತ್ತಿವೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಳಮೀಸಲಾತಿ ಜಾರಿಗೊಳಿಸಿದ್ದಾಗಿ ಹೇಳಿದರು. ಆದರೆ ಹೈಕೋರ್ಟ್ ಅದಕ್ಕೆ ತಡೆ ನೀಡಿದೆ. ಹೀಗಾಗಿ ಸರ್ಕಾರಿ ಹುದ್ದೆಗಳ ಭರ್ತಿಗೆ ಅಡ್ಡಿಯುಂಟಾಗಿದೆ. ಈ ವಿಚಾರದಲ್ಲಿ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವ ಕೆಲಸ ರಾಜ್ಯ ಸರ್ಕಾರದಿಂದ ಆಗುತ್ತಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಾವಂತ ವಿದ್ಯಾರ್ಥಿಗಳು ಹಾಗು ಸಮುದಾಯದ ನಿವೃತ್ತ ನೌಕರರಿಗೆ ಸನ್ಮಾನಿಸಲಾಯಿತು. ಜಿಲ್ಲಾ ಬಾಬು ಜಗಜೀವನರಾಮ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಬಸವರಾಜು, ವತ್ಸಲಾ ಕುಮಾರಸ್ವಾಮಿ, ಉದ್ಯಮಿ ಕಂಚಮಾರನಹಳ್ಳಿ ಲಕ್ಷ್ಮಿಕಾಂತ್, ವಕೀಲ ಅರುಣ್ ಕುಮಾರ್, ಭಾಸ್ಕರ ಪ್ರಸಾದ್, ಸಹಾಯಕ ಕೃಷಿ ನಿರ್ದೇಶಕ ತೀರ್ಥ ಪ್ರಸಾದ್, ಯಶೋಧರ್, ಶಿವಣ್ಣ, ಕೆ.ಪಿ.ಸುರೇಶ್, ಸೋಮಶೇಖರ್, ಜಿ.ಎಸ್. ಚಂದ್ರಾವತಿ, ರಂಗರಾಜು, ವಕೀಲ ಮಾಳಪ್ಪ ಮತ್ತಿತರರಿದ್ದರು.

# ಅತೃಪ್ತರ ತಣಿಸಲು ಹೈಕಮಾಂಡ್ ಮೊರೆ

» ಮೊದಲನೇ ಪುಟದಿಂದ

ಮರಳುವ ನಿರೀಕ್ಷೆ ಇದ್ದು, ಕೆಲವು ಪ್ರಮುಖ ಖಾತೆಗಳು ಅದಲು ಬದಲಾಗುವ ಸಾಧ್ಯತೆ ಇದೆ. ಗುರುವಾರದಿಂದ (ಆ.13) ರಾಜ್ಯ ವಿಧಾನಸಭೆ ಅಧಿವೇಶನ ಆರಂಭವಾಗಲಿರುವ ಹಿನ್ನಲೆಯಲ್ಲಿ ಭಾನುವಾರ ರಾತ್ರಿಯೇ ವರಿಷ್ಟರೊಂದಿಗೆ ಸಮಾಲೋಚಿಸಿ, ಸಚಿವರಿಗೆ ಆದಷ್ಟು ಬೇಗ ಖಾತೆಗಳನ್ನು ಹಂಚಿಕೆ ಮಾಡಲು ಮುಖ್ಯಮಂತ್ರಿ ಬಯಸಿದ್ದಾರೆ.

ಒಂದಿಬ್ಬರನ್ನು ಮನವೊಲಿಸಿ ಸಚಿವ ಸಂಪುಟದಿಂದ ಕೈಬಿಟ್ಟು, ಅತೃಪ್ತ ಹಿರಿಯ ಶಾಸಕರಿಗೆ ಅವಕಾಶ ಕಲ್ಪಿಸುವ ಚಿಂತನೆಯಿದೆ. ಈ ಬಗ್ಗೆ ಹೈಕಮಾಂಡ್ ನಾಯಕರ ಸಭೆಯಲ್ಲಿ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರೇ ಪ್ರಸ್ತಾಪಿಸಲು ಬಯಸಿದ್ದು, ಸೋಮವಾರದೊಳಗೆ ಅಂತಿಮ ತೀರ್ಮಾನವಾಗಲಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

**ಜಯಚಂದ್ರ, ಹಂಗಾಮಿ ಸಭಾಧ್ಯಕ್ಷ**

ಮಾಜಿ ಸಚಿವ ಟಿ.ಬಿ.ಜಯಚಂದ್ರ ಅವರು ಸೋಮವಾರದಿಂದ ಹಂಗಾಮಿ ವಿಧಾನಸಭಾ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಲಿದ್ದಾರೆ. ಆ.13 ರಿಂದ 27 ರವರೆಗೆ 10 ದಿನಗಳ ಕಾಲ ನಡೆಯಲಿರುವ ಮಳೆಗಾಲದ ವಿಧಾನ ಮಂಡಲ ಅಧಿವೇಶನವನ್ನು ಅವರು ನಡೆಸಿಕೊಡಲಿದ್ದಾರೆ.

ಅಧಿವೇಶನದ ಮೊದಲ ದಿನವಾದ ಗುರುವಾರ, ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಸಚಿವರಾಗಿದ್ದ ಡಿ. ಸುಧಾಕರ, ಮಾಜಿ ಪ್ರಧಾನಿ ದೇವೇಗೌಡ ಅವರ ಧರ್ಮಪತ್ನಿ ಚನ್ನಮ್ಮ ದೇವೇಗೌಡ ಸೇರಿ ಇತ್ತೀಚೆಗೆ ಅಗಲಿದ ಗಣ್ಯರಿಗೆ ಸಂತಾಪ ಸೂಚಿಸಲಾಗುವುದು. ಶುಕ್ರವಾರ ದಿಂದ ನಿಗದಿತ ವೇಳಾಪಟ್ಟಿಯಂತೆ ಕಲಾಪ ನಡೆಯಲಿದೆ.

# ಗದ್ದಲದಲ್ಲಿಯೇ ವ್ಯರ್ಥವಾದ ಸಂಸತ್ ಅಧಿವೇಶನ

• ಪ್ರಜೋದಯ ವರದಿ

**ನವದೆಹಲಿ :** ಸಂಸತ್ತಿನ ಮುಂಗಾರು ಅಧಿವೇಶನ ಅಂತ್ಯಗೊಳ್ಳಲು ಕೇವಲ ನಾಲ್ಕು ದಿನಗಳು ಬಾಕಿ ಇವೆ. ಆದರೆ, ಕಳೆದ 15 ದಿನ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ನಡೆದ ಕಲಾಪಗಳಲ್ಲಿ ಯಾವುದೇ ಅರ್ಥಪೂರ್ಣ ಚರ್ಚೆ ನಡೆದಿಲ್ಲ.

ಕಳೆದ 15 ದಿನಗಳ ಕಲಾಪದಲ್ಲಿ ಲೋಕಸಭೆಯು ನಿಗದಿಪಡಿಸಿದ 90 ಗಂಟೆಗಳಲ್ಲಿ 15:36 ಗಂಟೆ ಮಾತ್ರ ಕಾರ್ಯನಿರ್ವಹಿಸಿದೆ. ಈ ಅವಧಿಯಲ್ಲಿ ಎಂಟು ಮಸೂದೆಗಳನ್ನು ಅಂಗೀಕರಿಸಿದೆ. ಆಗಸ್ಟ್ 3 ಮತ್ತು 7ರ ನಡುವೆ ಕೆಳಮನೆಯು ಕೇವಲ 103 ನಿಮಿಷ ಕಾರ್ಯನಿರ್ವಹಿಸಿದೆ. ರಾಜ್ಯಸಭೆಯು 15 ಕಲಾಪಗಳಲ್ಲಿ 24.21 ಗಂಟೆ ಕಾರ್ಯನಿರ್ವಹಿಸಿದೆ. ಈ ಅವಧಿಯಲ್ಲಿ ಆರು ಮಸೂದೆಗಳನ್ನು ಅಂಗೀಕರಿಸಿದೆ. ಆಗಸ್ಟ್ 3 ಮತ್ತು 7ರ ನಡುವೆ ಮೇಲ್ಮನೆಯು 10:56 ಗಂಟೆ ಕಾರ್ಯನಿರ್ವಹಿಸಿದೆ. ಸೋಮವಾರ ಲೋಕಸಭೆಯಲ್ಲಿ ನಾಲ್ಕು ಮತ್ತು ರಾಜ್ಯಸಭೆಯಲ್ಲಿ ಎರಡು ಮಸೂದೆಗಳನ್ನು ಮಂಡಿಸಲು ಸರ್ಕಾರ ಪಟ್ಟಿ ಮಾಡಿದೆ. ಕ್ಷೇತ್ರಪುನರ್ ವಿಂಗಡಣೆ, ವಿದೇಶಿ ದೇಣಿಗೆ ನಿಯಂತ್ರಣ ತಿದ್ದುಪಡಿ ಮಸೂದೆಯನ್ನು ಬೆಂಬಲಿಸಲು ಮನವಿ ಮಾಡಿದ್ದರು. ಆದರೆ ಈ ಕಾಯ್ದೆಗಳನ್ನು ಕಾಂಗ್ರೆಸ್ ಬೆಂಬಲಿಸುವುದಿಲ್ಲ ಎಂದು ರಾಹುಲ್ ಗಾಂಧಿ ಸ್ಪಷ್ಟಪಡಿಸಿದ್ದರು.

# ಹಿರೀಸಾವೆಯಲ್ಲಿ ಶ್ರೀ ಮಾರಿಯಮ್ಮ ದೇವಿ ಹಬ್ಬ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಹಿರೀಸಾವೆ ಗ್ರಾಮದಲ್ಲಿ ಶ್ರೀ ಮಾರಿಯಮ್ಮ ದೇವಿಯ ಹಬ್ಬವನ್ನು ಭಾನುವಾರ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ಹಬ್ಬದ ಹಿನ್ನಲೆಯಲ್ಲಿ ಗ್ರಾಮದ ಹೊರ ವಲಯದಲ್ಲಿ ಬೇವಿನ ಮರದ ಕೆಳಗೆ ಹಸಿರು ಚಪ್ಪರ ಹಾಕಿ ತಳಿರು-ತೋರಣ ಕಟ್ಟಿ ವಿವಿಧ ಬಗೆಯ ಪುಷ್ಪಗಳಿಂದ ಸಿಂಗರಿಸಿ ರಂಗೋಲಿ ಬಿಡಿಸಿ ಅಲಂಕರಿಸಲಾಗಿತ್ತು. ಬೆಳಿಗ್ಗೆ 10.30ಕ್ಕೆ ಮಂಗಳವಾದ್ಯದೊಂದಿಗೆ ಆರತಿ ಉತ್ಸವ ಪ್ರಾರಂಭಗೊಂಡು ಶ್ರೀ ಚೌಡೇಶ್ವರಿ ದೇವಿಯ ಮುಖ್ಯ ದ್ವಾರದ ಮೂಲಕ ಹೊರವಲಯದಲ್ಲಿ ನಿರ್ಮಿಸಿರುವ ಹಸಿರು ಚಪ್ಪರದ ಬಳಿಗೆ ಮೆರವಣಿಗೆ ಸಾಗಿತು.

ಹೆಣ್ಣು ಮಕ್ಕಳು ತಂಬಿಟ್ಟಿನ ಆರತಿ ಹೊತ್ತು ಸಾಗಿದರೆ, ತಾಯಂದಿರು ಮಾರಿಯಮ್ಮ ದೇವಿಯ ಮೇಲಿನ ಸೋಬಾನ ಪದ ಹಾಡಿದ್ದು ಮೆರವಣಿಗೆಗೆ ಮೆರಗು ನೀಡಿತು. ಬಳಿಕ ಪ್ರತಿಷ್ಠಾಪಿಸಿದ್ದ ಶ್ರೀ ಮಾರಿಯಮ್ಮ ದೇವಿಗೆ ವಿವಿಧ ಪುಷ್ಪಗಳಿಂದ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಲಾ ಯಿತು. ಹೆಣ್ಣು ಮಕ್ಕಳು ದೇವಿಗೆ ತಂಬಿಟ್ಟಿನ ಆರತಿ ಬೆಳಗಿಸುವ ಮೂಲಕ ಭಕ್ತಿ ಭಾವದಲ್ಲಿ ತೇಲಿದರು. ಮಹಾ ಮಂಗಳಾರತಿ ಬಳಿಕ ಪ್ರಸಾದ ವಿನಿಯೋಗ ನಡೆಯಿತು.

ಸಮುದಾಯದ ಮುಖಂಡ ಮಂಜುನಾಥ್ ಅವರು ಮಾತನಾಡಿ, ಶ್ರೀ ಮಾರಿಯಮ್ಮ ದೇವಿಯ ದೇಗುಲವನ್ನು ನಿರ್ಮಿಸಲು ನಿವೇಶನ ಹಾಗು ಸಹಕಾರ ಅಗತ್ಯವಿದೆ. ಹಲವು ವರ್ಷಗಳಿಂದ ಜನಪ್ರತಿನಿಧಿಗಳು ಹಾಗು ಅಧಿಕಾರಿಗಳಿಗೆ ಮನವಿ ಮಾಡುತ್ತಿದ್ದೇವೆ. ಆದರೂ ಫಲಪ್ರದವಾಗುತ್ತಿಲ್ಲ ಎಂದರು. ಪ್ರಮುಖರಾದ ಹೆಚ್.ಎಸ್.ರವಿಕುಮಾರ್, ಹೆಚ್.ಈ.ಬೋರಣ್ಣ ಇತರರಿದ್ದರು.

# ಬಿಡದಿ ಟೌನ್‌ಶಿಪ್ ವಿರೋಧಿಸಿ ಜೆಡಿಎಸ್ ಪಾದಯಾತ್ರೆ

## ಮೂರು ದಿನಗಳ ಹೋರಾಟಕ್ಕೆ ಹೆಚ್.ಡಿ.ಕೆ. ಚಾಲನೆ | ಬಿಜೆಪಿ ನಾಯಕರು ಭಾಗಿ

• ಪ್ರಜೋದಯ ವರದಿ

**ಬೆಂಗಳೂರು:** ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ಜೆಡಿಎಸ್ ವತಿಯಿಂದ ಬೈರಮಂಗಲದಿಂದ ಬೆಂಗಳೂರು ವರೆಗೆ ಹಮ್ಮಿಕೊಂಡಿರುವ ಮೂರು ದಿನಗಳ ಪಾದಯಾತ್ರೆಗೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಭಾನುವಾರ ಬೈರಮಂಗಲದಲ್ಲಿ ಚಾಲನೆ ನೀಡಿದರು.



ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಪಕ್ಷದ ಸಾವಿರಾರು ಕಾರ್ಯಕರ್ತರ ಘೋಷಣೆಗಳ ನಡುವೆ ಪಾದಯಾತ್ರೆ ಶುರುವಾಯಿತು. ಮಾರ್ಗದುದ್ದಕ್ಕೂ ನಮ್ಮ ಭೂಮಿ, ನಮ್ಮ ಹಕ್ಕು ಘೋಷಣೆಗಳು ಮೊಳಗಿದವು. ಪ್ರತಿಭಟನಾ ಫಲಕಗಳು, ಫ್ಲೆಕ್ಸ್‌ಗಳು ಪಾದಯಾತ್ರೆಯುದ್ದಕ್ಕೂ ರಾರಾಜಿಸಿದವು. ಪಾದಯಾತ್ರೆಗಾಗಿ ವಿವಿಧ ಭಾಗಗಳಿಂದ ಬಸ್ಸು ಸೇರಿ ಇತರ ವಾಹನಗಳಲ್ಲಿ ಪಕ್ಷದ ಕಾರ್ಯಕರ್ತರು ಬಂದಿದ್ದರಿಂದ, ಬಿಡದಿ ಕೈಗಾರಿಕಾ ಪ್ರದೇಶದಿಂದಲೇ ವಾಹನಗಳ ಸಂಚಾರ ಮಾರ್ಗವನ್ನು ಬದಲಾವಣೆ ಮಾಡಲಾಗಿತ್ತು. ಬೆಳಿಗ್ಗೆಯಿಂದಲೇ ಬಿಡದಿ-ಹಾರೋಹಳ್ಳಿ ರಸ್ತೆಯಲ್ಲಿ ಸಂಚಾರ ಬಂದ್ ಆಗಿತ್ತು.

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಮಾತನಾಡಿ, ಬಿಡದಿ ಟೌನ್‌ಶಿಪ್ ಯೋಜನೆಯನ್ನು ಸರ್ಕಾರ ಕೈಬಿಡುವವರೆಗೂ ದೇವೇಗೌಡರ ಕುಟುಂಬ ಮತ್ತು ಜೆಡಿಎಸ್ ಪಕ್ಷವು ರೈತರ ಪರವಾಗಿ ಹೋರಾಟ ಮುಂದುವರಿಸಲಿದೆ ಎಂದು ಎಚ್ಚರಿಕೆ ನೀಡಿದರು.

ಕಾಂಗ್ರೆಸ್ ಸರ್ಕಾರದ ದ್ವಂದ್ವ ನೀತಿ ಅನುಸರಿಸುತ್ತಿದೆ. ಕಳೆದ 500ಕ್ಕೂ ಹೆಚ್ಚು ದಿನಗಳಿಂದ ರೈತರು ತಮ್ಮ ಸ್ವಂತ ಆಸ್ತಿ ಉಳಿಸಿಕೊಳ್ಳಲು ನಿರಂತರ ಹೋರಾಟ ನಡೆಸುತ್ತಿದ್ದಾರೆ. ಹೆಚ್.ಡಿ.ದೇವೇಗೌಡರು ಸರ್ಕಾರ ಈ ಯೋಜನೆಯಿಂದ ಹಿಂದೆ ಸರಿಯದಿದ್ದರೆ ಸತ್ಯಾಗ್ರಹ ಕೂರುತ್ತೇವೆಂದು ಎಚ್ಚರಿಕೆ ನೀಡಿದ ಮಾರನೇ ದಿನವೇ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಮಿತಿ ರಚನೆಯ ಭರವಸೆ ನೀಡಿದ್ದರು. ಆದರೆ, ಭರವಸೆ ನೀಡಿ ನಂತರ ಮತ್ತೆ ನಾಲ್ಕು ಗ್ರಾಮಗಳ ಅಂತಿಮ ಅಧಿಸೂಚನೆ ಹೊರಡಿಸಿದ್ದಾರೆ. ಇದು ಸರ್ಕಾರದ ದ್ವಂದ್ವ ನೀತಿಯನ್ನು ಎತ್ತಿ ತೋರಿಸುತ್ತದೆಂದರು.

ಚುನಾವಣೆ ಹಾಗು ಭೇಟಿ ಸಂದರ್ಭಗಳಲ್ಲಿ ರಾಮನಗರದ ಜನರ ಬಳಿ ನಮಗೆ ಪೆನ್ನು, ಪೇಪರ್ ಕೊಡಿ ಎಂದು ಕೇಳಿದ್ದ ಆಡಳಿತ ಪಕ್ಷದ ನಾಯಕರು, ಈಗ ಅದೇ ಪೆನ್ನು-ಪೇಪರ್ ಬಳಸಿ ರೈತರಿಗೆ ಮರಣ ಶಾಸನ ಬರೆಯಲು ಹೊರಟಿದ್ದಾರೆಯೇ ಎಂದು ಪ್ರಶ್ನಿಸಿದರು.

ಈ ಟೌನ್‌ಶಿಪ್ ಯೋಜನೆಯಿಂದಾಗಿ ಸುಮಾರು 10 ಲಕ್ಷ ತೆಂಗು, ಮಾವು, ಬಾಳೆ ಮತ್ತು ಅಡಿಕೆ ಮರಗಳ ಮಾರಣ ಹೋಮ ನಡೆಯಲಿದೆ. 33 ಸಾವಿರ ಕೋ.ರೂ. ಲಾಭ ಮಾಡಿಕೊಳ್ಳಲು ಸರ್ಕಾರ ಈ ಬೃಹತ್ ಯೋಜನೆಯನ್ನು ಜಾರಿಗೊಳಿಸಲು ಹೊರಟಿದೆ. ರೈತರ ಭೂಮಿಗೆ ಪರಿಹಾರ ನೀಡಲು ಕನಿಷ್ಠ 11 ಸಾವಿರ ಕೋ.ರೂ. ಅಗತ್ಯವಿದೆ. ಆದರೆ ಸರ್ಕಾರದ ಬಳಿ ಹಣವೇ ಇಲ್ಲ. ನಿಮ್ಮ ಬಳಿ ಹಣವಿದ್ದರೆ ತೋರಿಸಿ ಎಂದು ಸರ್ಕಾರಕ್ಕೆ ಸವಾಲೆಸೆದ ಅವರು, ಯೋಜನೆಯ ವ್ಯಾಪ್ತಿಗೆ ಬರುವ 2,000 ರೈತರ ಪೈಕಿ ಕೇವಲ 50 ಜನರು ಮಾತ್ರ ಪರಿಹಾರ ಧನ ಪಡೆದಿದ್ದಾರೆ. ಬಹುತೇಕ ರೈತರು ಭೂಮಿ ನೀಡಲು ಸಿದ್ಧರಿಲ್ಲ ಎಂದರು.

ಈ ಜಿಲ್ಲೆಯಲ್ಲಿ ನಾವು ಹುಟ್ಟದೇ ಇದ್ದರೂ, ರಾಮನಗರದ ಜನರು ದೇವೇಗೌಡರ ಕುಟುಂಬಕ್ಕೆ ಜಿಲ್ಲೆಯ ಮಗ ಎನ್ನುವ ಗೌರವ ಕೊಟ್ಟಿದ್ದಾರೆ. ರೈತರ ಭೂಮಿ ಉಳಿಸಲು ನಮ್ಮ ಕುಟುಂಬ ಕೊನೆ ಉಸಿರಿರುವ ತನಕ ಹೋರಾಡಲಿದೆ. ಈ ಸಂಬಂಧ ಈಗಾಗಲೇ ಕಾನೂನು ಹೋರಾಟವೂ ಆರಂಭವಾಗಿದೆ. ರೈತರು ಯಾವ ಕಾರಣಕ್ಕೂ ಧೃತಿಗೆಡಬಾರದು. ಈ ಮೂರು ದಿನಗಳ ಪಾದಯಾತ್ರೆಯ ಮೂಲಕ ಸರ್ಕಾರಕ್ಕೆ ಬಿಸಿ ಮುಟ್ಟಿಸುತ್ತೇವೆಂದು ಗುಡುಗಿದರು.

# ಅರಕಲಗೂಡಿನಲ್ಲಿ ಆರಂಭಗೊಳ್ಳದ ಗೂಡಂಗಡಿಗಳ ತೆರವು ಕಾರ್ಯಾಚರಣೆ

- ರವಿ ದುಮ್ಮಿ

• ಪ್ರಜೋದಯ ವರದಿ

**ಅರಕಲಗೂಡು:** ಸುಪ್ರೀಂ ಕೋರ್ಟ್ ಆದೇಶದನ್ವಯ ರಾಜಧಾನಿ ಬೆಂಗಳೂರು ಸೇರಿ ಹಾಸನ ಜಿಲ್ಲೆಯ ವಿವಿಧ ತಾಲ್ಲೂಕು ಕೇಂದ್ರಗಳಲ್ಲಿ ರಸ್ತೆ ಬದಿಯ ಅನಧಿಕೃತ ಗೂಡಂಗಡಿಗಳ ತೆರವು ಕಾರ್ಯಾಚರಣೆ ಪೂರ್ಣಗೊಳ್ಳುವ ಹಂತಕ್ಕೆ ಬಂದಿದ್ದರು ಅರಕಲಗೂಡು ತಾಲ್ಲೂಕು ಆಡಳಿತ ಮಾತ್ರ ಇನ್ನೂ ಕಾರ್ಯಾಚರಣೆ ಕೈಗೊಳ್ಳದಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.



ಪಟ್ಟಣ ಪಂಚಾಯಿತಿ ಆಡಳಿತ ವ್ಯವಸ್ಥೆಯನ್ನು ಹೊಂದಿರುವ ಪಟ್ಟಣದಲ್ಲಿ 17ವಾರ್ಡ್‌ಗಳು ಕಂಡುಬರುತ್ತವೆ.ಆದರೆ ಯಾವುದೇ ವಾರ್ಡ್‌ಗಳಲ್ಲಿ ನಿಯಮಾನುಸಾರ ಸಾರ್ವಜನಿಕ ರಸ್ತೆಗಳ ನಿರ್ಮಾಣ ಆಗಿಲ್ಲದಿರುವುದು ಆಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಸುಮಾರು ಎರಡು ಕಿ.ಮೀ. ದೂರದ ತನಕ ಪಟ್ಟಣ ವಿಸ್ತೀರ್ಣವನ್ನು ಹೊಂದಿದೆ. ಪೇಟೆ ಮುಖ್ಯ ರಸ್ತೆ ಸೇರಿ ಎಲ್ಲಾ ರಸ್ತೆಗಳು ಹೊಂದಿಕೊಂಡಂತೆ ಇರುವ ಸಾರ್ವಜನಿಕ ರಸ್ತೆ ಪಕ್ಕದಲ್ಲಿನ ಫುಟ್‌ಪಾತ್ ಜಾಗದಲ್ಲಿ ಗೂಡಂಗಡಿಗಳ ಕಾರುಬಾರು ಅಧಿಕವಾಗಿ ಕಂಡುಬರುತ್ತದೆ.ಅದರೊಂದಿಗೆ ಪಾನಿಪೂರಿ, ಗೋಬಿ, ತಿಂಡಿ ತಿನಿಸುಗಳ ಗಾಡಿಗಳು, ತರಕಾರಿ, ಹಣ್ಣು ಹಂಪಲು ವ್ಯಾಪಾರ ಮಾಡುವ ಅಂಗಡಿಗಳು ಪೈಪೋಟಿಯಿಂದ ವ್ಯಾಪಾರ ನಡೆಸುತ್ತಿವೆ. ಅವುಗಳಿಂದ ಪಟ್ಟಣ ಪಂಚಾಯಿತಿಗೆ ನಿತ್ಯವೂ ಸಾವಿರಾರು ರೂಪಾಯಿ ಹಣ ತೆರಿಗೆ ರೂಪದಲ್ಲಿ ಸಂಗ್ರಹ ವಾಗುತ್ತಿದೆ. ಆದರೆ ಶಾಶ್ವತವಾಗಿ ಬೀದಿಬದಿ ವ್ಯಾಪಾರಿಗಳಿಗೆ ಸೂರು ಕಲ್ಪಿಸುವ ವ್ಯವಸ್ಥೆಯನ್ನು ಒದಗಿಸದೇ ಇರುವುದು ಗೂಡಂಗಡಿಗಳು ಹೆಚ್ಚಲು ಮುಖ್ಯಕಾರಣವಾಗಿದೆ.



### ಅನಕೃ ವೃತ್ತದಲ್ಲಿ ಜನದಟ್ಟಣೆ

ಪಟ್ಟಣದ ಅನಕೃ ವೃತ್ತಕ್ಕೆ ಹೊಂದಿಕೊಂಡಂತೆ ಪಟ್ಟಣ ಪಂಚಾಯಿತಿ ಕಚೇರಿ, ಅಂಚೆ ಕಚೇರಿ, ಹೆಚ್‌ಡಿಸಿಸಿ ಬ್ಯಾಂಕ್ ಶಾಖೆ, ಹಳೆಯ ಬಸ್ ನಿಲ್ದಾಣ, ಪಶು ಆಸ್ಪತ್ರೆ ಇವೆ. ಒಟ್ಟು ಐದು ರಸ್ತೆಗಳು ಸೇರುತ್ತವೆ. ಅದರೊಂದಿಗೆ ಒಂದು ಬದಿ ಹೂವಿನ ವ್ಯಾಪಾರಿಗಳಿಗೆ ಶೆಡ್, ಮತ್ತೊಂದು ಕಡೆ ಆಟೋ ನಿಲ್ದಾಣಕ್ಕೆ ಅವಕಾಶಮಾಡಿಕೊಡಲಾಗಿದೆ. ಅದರೊಂದಿಗೆ ರಸ್ತೆ ಬದಿಯಲ್ಲಿ ದಿನವಹಿ ವ್ಯಾಪಾರಿಗಳ ಕಾರು ಬಾರು ಕಂಡುಬರುತ್ತದೆ. ಅದರಿಂದ ವಾಹನ ಸಂಚಾರ, ನಿಲುಗಡೆಗೆ, ಜನ ಸಂಚಾರಕ್ಕೆ ತುಂಬಾ ಅಡಚಣೆ ಉಂಟಾಗಿದೆ. ಈ ಪರಿಸ್ಥಿತಿಯನ್ನು ಕಣ್ಣಾರೆ ಕಂಡರೂ ಕೂಡ ಪಟ್ಟಣ ಪಂಚಾಯಿತಿ ಆಡಳಿತ, ಪೊಲೀಸ್ ಇಲಾಖೆ ತಲೆಕೆಡಿಸಿಕೊಂಡಿಲ್ಲ.

### ಮುಚ್ಚಿಹೋಗಿರುವ ಇಂದಿರಾ ಕ್ಯಾಂಟೀನ್

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆ ಇಂದಿರಾ ಕ್ಯಾಂಟೀನ್‌ನ್ನು ಸಾರ್ವಜನಿಕ ಅನುಕೂಲ ಸ್ಥಳದಲ್ಲಿ ನಿರ್ಮಿಸಿ ಬಡವರು, ವಿದ್ಯಾರ್ಥಿಗಳಿಗೆ ತಿಂಡಿ, ಊಟವನ್ನು ಕಲ್ಪಿಸಲಾ ಗುತ್ತಿತ್ತು. ಕ್ಯಾಂಟೀನ್ ಮುಂಭಾಗದಲ್ಲಿ ಪಾನಿಪೂರಿ, ಗೋಬಿ ಗಾಡಿಗಳು, ಎಳೆನೀರು, ಹೂವಿನ ವ್ಯಾಪಾರ, ಹಣ್ಣು ಹಂಪಲು, ಟೊಮೋಟ, ಈರುಳ್ಳಿ ಬೆಳ್ಳುಳ್ಳಿ, ಹಸಿ ತರಕಾರಿ ಮಾರಾಟದ ಗಾಡಿಗಳ ಹಾವಳಿ ಅಧಿಕಗೊಂಡ ಹಿನ್ನಲೆ ಇಂದಿರಾ ಕ್ಯಾಂಟೀನ್‌ಗೆ ಹೋಗುವ ದಾರಿ ಸಂಪೂರ್ಣವಾಗಿ ಮುಚ್ಚಿ ಹೋಗಿದೆ. ಅದರಿಂದ ಜನರು ಸವಲತ್ತುಗಳನ್ನು ಪಡೆದುಕೊಳ್ಳಲು ಹೋಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

### ಶೆಡ್‌ಗಳಿಂದ ಕೂಡಿರುವ ಸಾರಿಗೆ ಬಸ್ ನಿಲ್ದಾಣ

ಪಟ್ಟಣದ ಸಾರಿಗೆ ಬಸ್ ನಿಲ್ದಾಣವನ್ನು 4ಎಕರೆ ಪ್ರದೇಶದಲ್ಲಿ ನಿರ್ಮಿಸಲಾಗಿದೆ. ಬಸ್ ನಿಲ್ದಾಣ ವಿಶಾಲವಾಗಿದ್ದರೂ ಕೂಡ ಸಾರ್ವಜನಿಕ ಪ್ರಯಾಣಿಕರಿಗೆ ಕಣ್ಮರೆಯಾಗುವ ಭೀತಿ ಎದು ರಾಗಿದೆ. ಬಸ್ ನಿಲ್ದಾಣದ ಮುಂಭಾಗದಲ್ಲಿನ ಸಾರ್ವಜನಿಕ ರಸ್ತೆ ಎರಡು ಬದಿಯಲ್ಲಿ ಪ್ಲಾಸ್ಟಿಕ್, ಟಾರ್ಪಲ್‌ನಿಂದ ವ್ಯಾಪಾರಿಗಳು ಶೆಡ್‌ಗಳನ್ನು ನಿರ್ಮಿಸಿಕೊಂಡು ವಿವಿಧ ರೀತಿಯ ವ್ಯಾಪಾರ ನಡೆಸುತ್ತಿದ್ದಾರೆ. ಅದರಿಂದ ವಾಹನ ಸಂಚಾರ, ಸಾರ್ವಜನಿಕರು ಓಡಾಡಲು ತುಂಬಾ ತೊಂದರೆ ಯಾಗಿದೆ. ಇದೇ ಪರಿಸ್ಥಿತಿ ಕುವೆಂಪು ಪಾರ್ಕ್ ಮುಂಭಾಗ, ದೊಡ್ಡಮ್ಮ ವೃತ್ತ, ನಂಜೇಗೌಡ ವೃತ್ತ ಹಾಗೂ ಸಂತೆಮರೂರು ವೃತ್ತದಲ್ಲಿ ಕಂಡುಬರುತ್ತದೆ.

### ಅಂಗಡಿಗಳಿಂದಲೂ ಅತಿಕ್ರಮಣ

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಿಂದ ಕೋಟೆ ಕೊತ್ತಲು ಗಣಪತಿ ದೇವಸ್ಥಾನದ ತನಕವೂ ರಸ್ತೆ ಬದಿಯಲ್ಲಿನ ವಾಣಿಜ್ಯ ಮಳಿಗೆಗಳು ಕೂಡ ಸಾರ್ವಜಕನಿಕ ರಸ್ತೆಯನ್ನು ದುರುಪಯೋಗ ಪಡಿಸಿಕೊಂಡು ಶೆಡ್ ನಿರ್ಮಿಸಿಕೊಂಡು ಬಟ್ಟೆ ಅಂಗಡಿ, ಕಾಫಿ ಟೀ ಶಾಪ್, ಬೀಡಾ ಸ್ಟಾಲ್, ಹಣ್ಣಿನ ಅಂಗಡಿ, ಕಬ್ಬಿನ ಜ್ಯೂಸ್ ಸೆಂಟರ್ ಸೇರಿ ಇತರೆ ಅಂಗಡಿಗಳು ಎಗ್ಗಿಲ್ಲದೆ ನಡೆಯುತ್ತಿವೆ. ಇಲ್ಲಿಗೆ ಬರುವ ಜನರು ತಮ್ಮ ವಾಹನಗಳ ನಿಲುಗಡೆ ಮಾಡಿ ವ್ಯಾಪಾರ ಮಾಡಲು, ತಿಂಡಿ ತಿನಿಸು ಗಳನ್ನು ತಿನ್ನಲು ಬಂದಾಗ ವಾಹನ ಸಂಚಾರಕ್ಕೆ ತೀವ್ರತರನ ತೊಂದರೆಯನ್ನು ಅನುಭವಿಸುವಂತಹ ಸಂಕಷ್ಟದ ಪರಿಸ್ಥಿತಿ ಇದೆ.

ಕೆಲವು ಕಡೆ 11ಕೆವಿ, 66ಕೆವಿ ಹಾದುಹೋಗಿರುವ ವಿದ್ಯುತ್ ಲೈನ್, ಟಿಸಿ ಅಳವಡಿಸಿರುವ ಕೆಳ ಭಾಗದಲ್ಲಿ ಅಂಗಡಿಗಳನ್ನು ಅನಧಿಕೃತವಾಗಿ ನಿರ್ಮಿಸಿಕೊಂಡು ವ್ಯಾಪಾರ ನಡೆಸಲಾಗುತ್ತಿದೆ. ಅವರಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ವೇಳೆ ಕೆಇಬಿ ಇಂಜಿನೀಯರ್ ಸಿಬ್ಬಂದಿಗಳು ಪರಿಶೀಲನೆ ನಡೆಸದೇ ಸಂಪರ್ಕ ಕಲ್ಪಿಸಲಾಗಿದೆ. ಇಂತಹ ಸ್ಥಳಗಲ್ಲಿ ಜನರು ಓಡಾಡಲು, ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗಿ ಪರಿಣಮಿಸಿದೆ.

### ಪರವಾನಗಿ ಇಲ್ಲದ ಅಂಗಡಿಗಳೇ ಹೆಚ್ಚು

ಪಟ್ಟಣದ 17 ವಾರ್ಡ್‌ಗಳಲ್ಲಿನ ಅಂಗಡಿಗಳನ್ನು ಗಮನಿಸಿದರೇ ಶೇ.90ರಷ್ಟು ಪರವಾನಗಿ ಪಡೆದಿಲ್ಲದಿರುವುದು ಕಂಡುಬರುತ್ತದೆ. ಜಿಎಸ್‌ಟಿ, ತೆರಿಗೆ ಸಂದಾಯ ಮಾಡುವ ನೂರು ಸಂಖ್ಯೆಯನ್ನು ದಾಟುವ ವರ್ತಕರು ಪಟ್ಟಣ ಪಂಚಾಯಿತಿಯಿಂದ ಪರವಾನಗಿ ಪಡೆದಿದ್ದಾರೆ. ರಸ್ತೆ ಬದಿಯ ಜಾಗವನ್ನು ಅತಿಕ್ರಮಣ ಮಾಡಿ ಅಂಗಡಿಗಳನ್ನು ನಿರ್ಮಿಸಿಕೊಂಡಿರುವ ಬಹುತೇಕ ಮಂದಿ ಅನುಮತಿ ಪಡೆದಿಲ್ಲ. ಕೇವಲ ರಸ್ತೆ ಬದಿಯಲ್ಲಿ ತರಕಾರಿ, ಹಣ್ಣು ಹಂಪಲು, ಹೂವು, ಎಲೆ ಅಡಿಕೆ, ಸೌತೆಕಾಯಿ, ಸೊಪ್ಪುಗಳನ್ನು ಮಾರುವವರಿಂದ ಶುಂಕವನ್ನು ವಸೂಲಿ ಮಾಡಲಾಗುತ್ತಿದೆ. ವರ್ಷಕ್ಕೆ ಒಮ್ಮೆಯಾದರೂ ಕೂಡ ಪಟ್ಟಣ ಪಂಚಾಯತಿ ಆಡಳಿತ ಅಥವಾ ತೆರಿಗೆ ಇಲಾಖೆ ಅಂಗಡಿಗಳು ಅಂಗಡಿಗಳ ತಪಾಸಣೆ ನಡೆಸಿದರೇ ಸರ್ಕಾರಕ್ಕೆ ಇಂತಿಷ್ಟು ಹಣ ತೆರಿಗೆ ರೂಪದಲ್ಲಿ ಸಂಗ್ರಹವಾಗುತ್ತದೆ. ಅದರಿಂದ ಅನಧಿಕೃತ ಶೆಡ್, ಅಂಗಡಿಗಳು ಅಧಿಕೃತಗೊಳ್ಳಲಿವೆ.

### ಆಡಳಿತಾಧಿಕಾರಿ ಚುರುಕುಗೊಳ್ಳಬೇಕಿದೆ

ಪಟ್ಟಣ ಪಂಚಾಯಿತಿ ಚುನಾಯಿತ ಆಡಳಿತ ಪೂರ್ಣಗೊಂಡಿರುವ ಹಿನ್ನಲೆ ತಹಶೀಲ್ದಾರ್ ಅವರು ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವಾರ್ಡ್ ಸಭೆ, ಸಾರ್ವಜನಿಕರಿಗೆ ಅನುಕೂಲವಾಗುವ ವಿಚಾರಗಳು, ಬೀದಿ ಬದಿ ವ್ಯಾಪಾರಿಗಳ ತೆರವು ಸೇರಿ ಯಾವುದೇ ಕಾನೂನಾತ್ಮಕವಾದ ಕಾರ್ಯವನ್ನು ಕೈಗೊಂಡಿಲ್ಲ. ಕೇವಲ ನೀರು ಕೊಡುವುದು, ಸ್ವಚ್ಚತೆ ಮಾಡುವುದು, ಕಚೇರಿ ಕೆಲಸಗಳನ್ನು ಮಾತ್ರ ನಿರ್ವಹಿಸಲಾಗುತ್ತಿದೆ. ಪಟ್ಟಣದ ಅಂದ, ಸ್ವಚ್ಚತೆಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಆಡಳಿತಾಧಿಕಾರಿ, ಮುಖ್ಯಾಧಿಕಾರಿ ಕೈಗೊಳ್ಳುತ್ತಿಲ್ಲ ಎಂದು ಸಾರ್ವಜನಿಕರ ಆರೋಪವಾಗಿದೆ.

> **ಜಿಲ್ಲಾ ಮಟ್ಟದಲ್ಲಿ ಈಗಾಗಲೇ ರಸ್ತೆ ಬದಿಯ ಅನಧಿಕೃತ ಶೆಡ್‌ಗಳು, ಫುಟ್‌ಪಾತ್ ತೆರವು ಕಾರ್ಯವನ್ನು ಕೈಗೊಳ್ಳಲಾಗಿದೆ. ಎಸ್‌ಐಆರ್ ಕಾರ್ಯದಲ್ಲಿ ತೊಡಗಿಕೊಂಡಿರುವ ಹಿನ್ನಲೆ ಅರಕಲಗೂಡು ಪಟ್ಟಣದಲ್ಲಿ ಸುಗಮ ಸಂಚಾರಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಅನಧಿಕೃತ ಶೆಡ್, ಪಾದಚಾರಿ ರಸ್ತೆಯಲ್ಲಿ ಅಂಗಡಿಗಳನ್ನು ತೆರವುಗೊಳಿಸುವ ಕೆಲಸ ಸದ್ಯದಲ್ಲಿಯೇ ಆರಂಭಿಸಲಾಗುವುದು. ಈ ಕುರಿತು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ, ಪಿಡಬ್ಲೂಡಿ, ಪೊಲೀಸ್ ಇಲಾಖೆ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳ ಸಭೆ ನಡೆಸಿ ಕ್ರಮ ಕೈಗೊಳ್ಳಲಾಗುವುದು.**
> **-ಕೆ.ಸಿ.ಸೌಮ್ಯ, ತಹಶೀಲ್ದಾರ್, ಪಟ್ಟಣ ಪಂಚಾಯಿತಿ ಆಡಳಿತಾಧಿಕಾರಿ**

> **ಅರಕಲಗೂಡು ಪಟ್ಟಣದ ಮುಖ್ಯ ರಸ್ತೆ ವಿಶಾಲವಾಗಿಲ್ಲ. ಅದರೊಂದಿಗೆ ಹಲವರು ರಸ್ತೆಗೆ ಹೊಂದಿಕೊಂಡಂತೆ ಅಂಗಡಿಗಳನ್ನು ನಿರ್ಮಿಸಿಕೊಂಡು ವ್ಯಾಪಾರ ವಹಿವಾಟು ನಡೆಸುತ್ತಿದ್ದಾರೆ. ಗೂಡಂಗಡಿಗಳು, ರಸ್ತೆ ಬದಿಯಲ್ಲಿನ ವ್ಯಾಪಾರಿಗಳು ಹೆಚ್ಚಿನದಾಗಿ ಇದ್ದಾರೆ. ಬೀದಿ ಬದಿ ವ್ಯಾಪಾರವನ್ನು ನಂಬಿಕೊಂಡು ಜೀವನ ಮಾಡುತ್ತಿರುವವರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಿ ತೆರವು ಕಾರ್ಯ ಕೈಗೊಳ್ಳುವುದು ಸೂಕ್ತವಾಗಿದೆ.**
> **- ರವಿಕುಮಾರ್, ಬೀದಿಬದಿ ವ್ಯಾಪಾರಿ**




# ನನ್ನನ್ನು ಖರೀದಿಸುವವರು ಹುಟ್ಟಿಲ್ಲ

» ನಾಲ್ಕನೇ ಪುಟದಲ್ಲಿ

ಇವರೆಲ್ಲರೂ, ದಲಿತರ ಭೂಮಿ ಪಡೆದುಕೊಳ್ಳಲು ಯಾವ್ಯಾವ ದಾಖಲೆಗಳನ್ನು ಸೃಷ್ಟಿಸಿದ್ದಾರೆ. ಏನೇನು ವ್ಯಾಪಾರ ಮಾಡುತ್ತಾರೆ ಎನ್ನುವುದೆಲ್ಲವೂ ನನಗೆ ಗೊತ್ತಿಲ್ಲವೇ. ರಾಜ್ಯದಲ್ಲಿ ವಿರೋಧ ಪಕ್ಷಗಳು ವಿಫಲವಾಗಿಲ್ಲ. ಅವ್ಯವಹಾರ, ಅಕ್ರಮಗಳ ಬಗ್ಗೆ ನಾವು ಮಾತಾಡಿ ದರೂ ಗೌರವ ಕೊಡದೇ ಹಣ, ಅಧಿಕಾರದ ಮದದಲ್ಲಿ ಸರ್ಕಾರ ಹೋಗುತ್ತಿದೆ ಎಂದು ದೂರಿದರು.

### ಸಮಿತಿ ವರದಿ ಏನಾಯಿತು

ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಮತ್ತೊಂದು ಸಮಿತಿಯಿಂದ ವರದಿ ಪಡೆಯಲು ಹೊರಟಿರುವುದು ನಗೆ ಪಾಟಲಲ್ಲದೇ ಬೇರೇನೂ ಅಲ್ಲ. 2006ರಲ್ಲಿ ಸದನ ಸಮಿತಿಯೇ ಸತ್ಯಶೋಧನಾ ವರದಿ ಕೊಟ್ಟಿದೆ. ಅದೇನಾ ಯಿತು, ಈಗೇಕೆ ಸಮಿತಿ ರಚಿಸಿದ್ದೀರಿ. ಆ ಸಮಿತಿಯಲ್ಲಿ ಸದಸ್ಯರಿದ್ದವರೇ ಈಗ ಮುಖ್ಯಮಂತ್ರಿ ಆಗಿದ್ದಾರೆ. ಮುಖ್ಯಮಂತ್ರಿ ಆದವರಿಗೆ ಪರಿಜ್ಞಾನ ಬೇಡವೇ ಎಂದು ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದರು.

### ಸರ್ವನಾಶ ಆಗುತ್ತೀರಿ ಎಚ್ಚರ

ದುಡ್ಡು ಹೊಡೆಯುವುದನ್ನೇ ಕೆಲಸ ಮಾಡಿಕೊಳ್ಳಬೇಡಿ. ಮುಂದಿನ ಚುನಾ ವಣೆಯಲ್ಲಿ ಸರ್ವನಾಶ ಆಗುತ್ತೀರಿ, ಎಚ್ಚರ ವಹಿಸಿ. ಜಾಹೀರಾತು ಕೊಡುವಾಗ, ಜನರು ನಂಬುವಂತೆ ಯಾದರೂ ಕೊಡಿ. ಬಿಡದಿ ಯೋಜನೆಯಲ್ಲಿ ಲೂಟಿ ಮಾಡಲು ಹೊರಟಿದ್ದಾರೆ. ದುಡ್ಡು ಮಾಡುವ ಕಾರ್ಯ ಕ್ರಮ ವಷ್ಟೆ ಇದು ಎಂದು ವಾಗ್ದಾಳಿ ನಡೆಸಿದರು.

### ಶಾಸಕಾಂಗ ಪಕ್ಷದ ಸಭೆ

ನಗರದಲ್ಲಿ ಪಕ್ಷದ ಶಾಸಕಾಂಗ ಪಕ್ಷದ ಸಭೆ ನಡೆಸಿದ ಕುಮಾರಸ್ವಾಮಿ ಅವರು, ತಮ್ಮ ಶಾಸಕರಿಗೆ ಹಲವು ಸೂಚನೆ ನೀಡಿದ್ದಾರೆ. ರಾಜ್ಯದಲ್ಲಿ ಉಂಟಾಗಿರುವ ಬರಗಾಲದ ಹಾಗು ನಿರ್ವಹಣೆಯಲ್ಲಿ ಸರ್ಕಾರ ವಿಫಲ ವಾಗಿದ್ದು, ಈ ಬಗ್ಗೆ ಸದನದಲ್ಲಿ ಧ್ವನಿ ಎತ್ತಬೇಕೆಂದು ಅವರು ಸೂಚಿಸಿದ್ದಾರೆ. ರೈತರ ಹಿತಕ್ಕೆ ವಿರುದ್ಧವಾಗಿ ರೂಪಿಸಿ ರುವ ಅವೈಜ್ಞಾನಿಕ ಬಿಡದಿ ಟೌನ್‌ಶಿಪ್ ಯೋಜನೆಯ ಬಗ್ಗೆಯೂ ಸದನದಲ್ಲಿ ಹೋರಾಟ ನಡೆಸಬೇಕು. ಈ ಯೋಜನೆಯಿಂದ ರೈತರು ಸಾವಿ ರಾರು ಎಕರೆ ಫಲವತ್ತಾದ ಭೂಮಿ ಕಳೆದುಕೊಳ್ಳುವ ಭೀತಿ ಎದುರಿಸುತ್ತಿದ್ದಾರೆ. ನಮ್ಮ ಪಕ್ಷ ರೈತರ ಪರವಾಗಿ ನಿಲ್ಲಬೇಕೆಂದು ತಿಳಿಸಿದ್ದಾರೆ.

ಬೆಂಗಳೂರು-ಮೈಸೂರು ಮೂಲ ಸೌಕರ್ಯ ಕಾರಿಡಾರ್ (ನೈಸ್) ಯೋಜನೆಯ ಬಗ್ಗೆಯೂ ಧ್ವನಿ ಎತ್ತಬೇಕು. ರಸ್ತೆ ನಿರ್ಮಾಣದ ಉದ್ದೇಶಕ್ಕೆ ಭೂಮಿಯನ್ನು ಪಡೆದು ಕೊಂಡು, ಅದನ್ನು ರಿಯಲ್ ಎಸ್ಟೇಟ್ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳುತ್ತಿದೆ. ಸಾವಿರಾರು ರೈತರಿಗೆ ಈ ವರೆಗೆ ಪರಿಹಾರ ದೊರೆತಿಲ್ಲ, ಕೆಲ ದಿನಗಳ ಹಿಂದೆ ರಾಜ್ಯ ಹೈಕೋರ್ಟ್ ಈ ಯೋಜನೆಯ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಇದೆಲ್ಲವನ್ನೂ ಪ್ರಸ್ತಾಪಿಸಬೇಕೆಂದು ಸೂಚಿಸಿದ್ದಾರೆ.

ಕೆಪಿಎಸ್‌ಸಿ ಅಕ್ರಮಗಳು, ಪೊಲೀಸ್ ನೇಮಕಾತಿಯಲ್ಲಿ ಆಗಿರುವ ಅಕ್ರಮಗಳು, ವಾಲ್ಮೀಕಿ ನಿಗಮದ ಹಗರಣ, ಬೆಂಗಳೂರು ನಗರದ ಅಸಮರ್ಪಕ ಕಸ ವಿಲೇವಾರಿ ಸೇರಿದಂತೆ ರಾಜ್ಯದ ಜನತೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಗಮನಸೆಳೆಯಬೇಕೆಂದು ನಿರ್ದೇಶನ ನೀಡಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019